ANANTHKUMAR PRATISHTHANA

# ಅನಂತಪಥ



ನಾನು ಕಂಡಂತೆ ಅನಂತಕುಮಾರ್

ಟಿ. ಎಸ್. ನಾಗಾಭರಣ
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ನಿರಂತರತೆಯ ಹರಿಕಾರ ಅನಂತಕುಮಾರ್ ಪುಟ 2

ಸಂಪುಟ - 2 ಫೆಬ್ರವರಿ - 2022 ಸಂಚಿಕೆ - 20

# ವೈರಿ ಆಸ್ತಿ ವಿಧೇಯಕ – ದೇಶಕ್ಕೆ ಅನಂತ ಕಾಣಿಕೆ



**1947** ರಲ್ಲಿ ಭಾರತದ ವಿಭಜನೆಯಾಗಿ ಪಾಕಿಸ್ತಾನದ ಉದಯವಾದಾಗ ಲಕ್ಷಾಂತರ ಜನರು ಪರಸ್ಪರ ದೇಶಗಳಿಗೆ ವಲಸೆ ಹೋದರು. ಅದೇ ರೀತಿ, 1965 ಮತ್ತು 1971 ರ ಭಾರತ ಪಾಕಿಸ್ತಾನಗಳ ನಡುವೆ ಯುದ್ಧ ನಡೆದಾಗ ಅನೇಕರು ಭಾರತದಿಂದ ಪಾಕಿಸ್ತಾನಕ್ಕೆ ವಲಸೆ ಹೋದರು. 1962 ರ ಭಾರತ ಚೀನಾ ಯುದ್ಧದ ಸಂದರ್ಭದಲ್ಲಿಯೂ ಅನೇಕರು ತಮ್ಮ ಆಸ್ತಿಗಳನ್ನು ತ್ಯಜಿಸಿ ಚೀನಾ ದೇಶದ ನಾಗರಿಕತೆಯನ್ನು ಸ್ವೀಕರಿಸಿದ್ದರು. 1947 ರಲ್ಲಿ ವಲಸೆ ಹೋದವರ ಆಸ್ತಿಪಾಸ್ತಿಗಳನ್ನು ಭಾರತ ದೇಶವು 1962 ರ "ದಿ ಡಿಫೆನ್ಸ್ ಆಫ್ ಇಂಡಿಯಾ" ಕಾನೂನಿನ್ವಯ ಮುಟ್ಟುಗೋಲು ಹಾಕಿಕೊಂಡಿತ್ತು.

1966 ಜನವರಿ 10 ರಂದು ಸಹಿ ಹಾಕಲಾದ ತಾಷ್ಕೆಂಟ್ ಒಪ್ಪಂದದ ಪ್ರಕಾರ ಭಾರತ ಮತ್ತು ಪಾಕಿಸ್ತಾನಗಳೆರಡೂ ತಾವು ಮುಟ್ಟುಗೋಲು ಹಾಕಿಕೊಂಡ ಆಸ್ತಿಗಳನ್ನು ಹಿಂದಿರುಗಿಸುವ ಬಗ್ಗೆ ಮಾತುಕತೆ ನಡೆಸಲು ಒಪ್ಪಿಕೊಂಡಿದ್ದವು. ಆದರೆ, ಈ ಒಪ್ಪಂದದಿಂದ ಹಿಂದೆ ಸರಿದ ಪಾಕಿಸ್ತಾನವು, 1971 ರಲ್ಲಿ ಭಾರತೀಯರು ಬಿಟ್ಟುಹೋಗಿದ್ದ ಆಸ್ತಿಗಳನ್ನು ಏಕಪಕ್ಷೀಯವಾಗಿ ಮಾರಾಟ ಮಾಡಿತು.

ಜನವರಿ, 2018 ರ ಹೊತ್ತಿಗೆ ಭಾರತದಲ್ಲಿ ಪಾಕಿಸ್ತಾನಿಗಳು ಬಿಟ್ಟುಹೋಗಿದ್ದ 9280 ವೈರಿ ಸ್ಥಿರಾಸ್ತಿಗಳು ಇದ್ದವು. ಅದೇ ರೀತಿ, 126 ಸ್ಥಿರಾಸ್ತಿಗಳನ್ನು ಚೀನೀಯರು ಬಿಟ್ಟು ಹೋಗಿದ್ದರು. ಇದಲ್ಲದೆ, 2323 ವೈರಿ ಪ್ರಜೆಗಳು 996 ಕಂಪೆನಿಗಳಲ್ಲಿ ಷೇರುದಾರರಾಗಿದ್ದರು. ಒಟ್ಟು 65075877 ಷೇರುಗಳು ಇವರ ಹೆಸರಿನಲ್ಲಿದ್ದವು. ಇವುಗಳ ಒಟ್ಟು ಮೌಲ್ಯ ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳಿಗೂ ಹೆಚ್ಚು ಎಂದು ಅಂದಾಜಿಸಲಾಗಿತ್ತು. ಈ ಎಲ್ಲ ಅಸ್ತಿಗಳು ದೇಶದಾದ್ಯಂತ ಅದರಲ್ಲೂ ಪ್ರಮುಖವಾಗಿ ಮಹಾನಗರಗಳಲ್ಲಿವೆ.

1962 ಮತ್ತು 1968 ರ ಕಾನೂನುಗಳಲ್ಲಿನ ದೋಷಗಳಿಂದಾಗಿ ಈ ಆಸ್ತಿಗಳನ್ನು ಬಳಸಿಕೊಳ್ಳಲೂ ಆಗದೆ, ಸುವ್ಯವಸ್ಥಿತವಾಗಿ ಕಾಪಾಡಿಕೊಳ್ಳಲೂ ಆಗದೆ ಅವುಗಳಲ್ಲಿ ಹೆಚ್ಚಿನ ಆಸ್ತಿಗಳನ್ನು ದುಷ್ಕರ್ಮಿಗಳು ಕಾನೂನು ಬಾಹಿರವಾಗಿ ಆಕ್ರಮಿಸಿಕೊಂಡಿದ್ದರು.

ಭಾರತವು 1968 ರಲ್ಲಿಯೇ ವೈರಿ ಆಸ್ತಿ ಕಾನೂನನ್ನು ಜಾರಿಗೆ ತಂದಿದ್ದರೂ ಅದರಲ್ಲಿ ಅನೇಕ ಲೋಪದೋಷಗಳಿದ್ದುದೇ ಇಂತಹ ಗೊಂದಲಗಳಿಗೆ ಕಾರಣವಾಯಿತು. 1968ರ ಕಾನೂನಿನಲ್ಲಿ ವಲಸೆ ಹೋದ ವೈರಿದೇಶದ ಪ್ರಜೆಗಳನ್ನು ಮಾತ್ರ ಪರಿಗಣಿಸಿ, ಹಿಂದೆ ಉಳಿದಿರಬಹುದಾದ ಅವರ ವಂಶಜರು ಪಟ್ಟಿಗೆ ಸೇರಿಸಿರಲಿಲ್ಲ. ಅದೇ ರೀತಿ ವೈರಿದೇಶದ ನಾಗರಿಕತೆ ಸ್ವೀಕರಿಸಿದ ಜನರ ಕಂಪೆನಿಗಳು ಅಥವ ಕಂಪೆನಿ ಷೇರುಗಳ ವಿಷಯದಲ್ಲಿಯೂ ಸ್ಪಷ್ಟತೆಯಿರಲಿಲ್ಲ. ಹೀಗಾಗಿ, ವೈರಿ ಪ್ರಜೆಯ ಮರಣಾನಂತರ ಭಾರತದಲ್ಲಿಯೇ ಉಳಿದಿದ್ದ, ಅಥವಾ ಬೇರೆ ದೇಶಗಳ ನಾಗರಿಕತೆ ಸ್ವೀಕರಿಸಿದ್ದ ಅವನ ವಂಶಸ್ಥರು ವಾರಸುದಾರಿಕೆ ಹಕ್ಕುಗಳಿಗಾಗಿ ನ್ಯಾಯಾಲಯಗಳ ಮೊರೆ ಹೋಗಲು ತೊಡಗಿದ್ದರು.

ಭಾರತದ ವಿಭಜನೆಯಾದಾಗ ವಿದೇಶಗಳಿಗೆ ವಲಸೆ ಹೋದವರಲ್ಲಿ ಉತ್ತರಪ್ರದೇಶದ ಮಹ್ಮದಾಬಾದಿನ ರಾಜನೂ ಒಬ್ಬ. ಈತ ಮೊದಲು ಇರಾಕಿಗೆ ವಲಸೆ ಹೋಗಿ ನಂತರ ಅಂತಿಮವಾಗಿ ಲಂಡನ್ ನಗರದಲ್ಲಿ ಶಾಶ್ವತವಾಗಿ ನೆಲೆಸಿದ. ಆದರೆ, ಆತ ವಲಸೆ ಹೋಗುವಾಗ ಹಜರತ್‌ಗಂಜ್, ಸೀತಾಪುರ ಮತ್ತು ನೈನಿತಾಲಗಳಲ್ಲಿ ಅಪಾರ ಆಸ್ತಿಯನ್ನು ಬಿಟ್ಟು ಹೋಗಿದ್ದ. ಇದನ್ನು ಭಾರತವು 1968 ರ ಕಾನೂನಿನ್ವಯ ವೈರಿ ಆಸ್ತಿ ಎಂದು ಪರಿಗಣಿಸಿ ಅದನ್ನು ಭಾರತದ ವೈರಿ ಆಸ್ತಿಗಳ ಕಸ್ಟೋಡಿಯನ್ ಸುಪರ್ದಿಗೆ ಒಪ್ಪಿಸಿತು.

ಆದರೆ, ರಾಜನ ಮರಣಾನಂತರ, ಭಾರತದಲ್ಲಿಯೇ ಉಳಿದುಕೊಂಡಿದ್ದ ಅವನ ಹೆಂಡತಿ ಮತ್ತು ಮಗ ಮೊಹಮದ್ ಆಮೀರ್ ಮೊಹಮದ್ ಖಾನ್ ಆಸ್ತಿಯನ್ನು ವಶ ಪಡಿಸಿಕೊಳ್ಳಲು ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿದರು. ಮೂವತ್ತು ವರ್ಷಗಳ ಕಾನೂನು ಸಮರದ ನಂತರ ಉಚ್ಚ ನ್ಯಾಯಾಲಯದ ಅಲ್ತಮಸ್ ಕಬೀರ್ ಮತ್ತು ಅಶೋಕ್ ಭಾನ್ ರವರನ್ನು ಒಳಗೊಂಡ ಪೀಠವು 21/10/2005 ರಂದು ಮಗನ ಪರವಾಗಿ ತೀರ್ಮಾನವನ್ನು ನೀಡಿತು. ಈ ತೀರ್ಮಾನದ ನಂತರ ಇತರ ಅನೇಕರು ನ್ಯಾಯಾಲಯಗಳನ್ನು ಎಡತಾಕತೊಡಗಿದರು. ಭಾರತದ ವೈರಿ ಆಸ್ತಿಗಳ ಕಸ್ಟೋಡಿಯನ್ ರವರಿಗೆ ತಮ್ಮ ಸುಪರ್ದಿನಲ್ಲಿದ್ದ ಆಸ್ತಿಗಳನ್ನು ಕಾಪಾಡಿಕೊಳ್ಳುವುದು ದುಸ್ತರವಾಗತೊಡಗಿತು.

ಮಹ್ಮದಾಬಾದ್ ರಾಜನ ಪ್ರಕರಣದಿಂದ ಎಚ್ಚೆತ್ತುಕೊಂಡ ಕೇಂದ್ರ ಸರಕಾರವು ಜುಲೈ 2, 2010 ರಂದು ಸುಗ್ರೀವಾಜ್ಞೆ ಹೊರಡಿಸಿ ವೈರಿಪ್ರಜೆಯ ವ್ಯಾಖ್ಯೆಯನ್ನು ಅವನ ವಂಶಸ್ಥರಿಗೂ ವಿಸ್ತರಿಸಿ ಉಚ್ಚನ್ಯಾಯಾಲಯದ ತೀರ್ಮಾನದಿಂದ ಕೈಬಿಟ್ಟುಹೋಗಿದ್ದ ಆಸ್ತಿಗಳನ್ನು ಮರು ವಶಪಡಿಸಿಕೊಂಡಿತು. ಈ ಸುಗ್ರೀವಾಜ್ಞೆಯನ್ನು ಕಾನೂನಾಗಿ ಪರಿವರ್ತಿಸಲು ಲೋಕಸಭೆಯಲ್ಲಿ ಜುಲೈ 22, 2010 ರಂದು ವಿಧೇಯಕವೊಂದನ್ನು ಮಂಡಿಸಲಾಯಿತು. ನವೆಂಬರ್ 15, 2010 ರಂದು ಪರಿಷ್ಕೃತ ವಿಧೇಯಕವನ್ನೂ ಮಂಡಿಸಲಾಯಿತು. ಆದರೆ ಅಂದಿನ ಸರಕಾರದ ಇಚ್ಛಾ ಶಕ್ತಿಯ ಕೊರತೆಯಿಂದಾಗಿ ಹಾಗೂ ತುಷ್ಟೀಕರಣ ರಾಜಕೀಯದ ಫಲವಾಗಿ ಈ ವಿಧೇಯಕಗಳು ನಿಷ್ಕ್ರಿಯವಾದವು.

ಪುಟ 7 ರಲ್ಲಿ ಮುಂದುವರೆದಿದೆ



ಅದಮ್ಯ ಚೇತನವು ಪಬ್ಲಿಕ್ ಟಿವಿ ಸಹಯೋಗದೊಡನೆ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ 1100 ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. (ವಿವರ ಪುಟ 10ರಲ್ಲಿ)



ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು, ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರ ಹುಟ್ಟುಹಬ್ಬದ ಸಂದರ್ಭ ಅವರನ್ನು ಭೇಟಿಮಾಡಿ ಶುಭಕೋರಿದರು.




ಶಿಕ್ಷಣದ ಪ್ರಗತಿಯಲ್ಲಿ ಪಂಚಾಯತಿ ಸದಸ್ಯೆಯರ ಪಾತ್ರ — ಎಂ. ಆರ್. ಅರುಣಕುಮಾರ್ — ಪುಟ 3



ಕೃಷಿ ಮತ್ತು ಹಸಿರು ಜೀವನ ಶೈಲಿ — ಟಿ.ವಿ. ಶ್ರೀಕಾಂತ ಶೆಣೈ — ಪುಟ 7



ಅಹಲ್ಯಾ ಬಾಯಿ ಹೋಳ್ಕರ್ — ಕೆ. ಜನಾರ್ದನ ತುಂಗ — ಪುಟ 9



ಸ್ವಸಹಾಯದಿಂದ ಸಬಲೀಕರಣ — ಶ್ರೀಮತಿ ಜಾಯ್ಸ್ ಪ್ರಕಾಶ್ — ಪುಟ 3

# ನಿರಂತರತೆಯ ಹರಿಕಾರ ಅನಂತಕುಮಾರ್

ಟಿ. ಎಸ್. ನಾಗಾಭರಣ
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ನಾನು ಕಂಡಂತೆ



ಅನಂತಕುಮಾರ್

**ನಾ**ವು ಆರಾಧಿಸುವ ವ್ಯಕ್ತಿಯ ಶಕ್ತಿಯ ಕೆಲವು ಅಂಶಗಳಾದರೂ ನಮ್ಮಲ್ಲಿ ಸಂಚಯಿಸಿಕೊಳ್ಳುತ್ತವೆ. ಅಂತಹ ವ್ಯಕ್ತಿಗೆ ಸಂಬಂಧಿಸಿದ ಯಾವುದೇ ಕೆಲಸ ಮಾಡಬೇಕಾದಾಗ ಇನ್ನಿಲ್ಲದ ಹುಮ್ಮಸ್ಸು ಬರುತ್ತದೆ. ನಾನು ಆರಾಧಿಸಿದ ಅಂತಹ ಅದ್ಭುತವಾದ ಒಬ್ಬ ವ್ಯಕ್ತಿ, ಅನಂತಕುಮಾರ್. ಅವರ ನೆನಪು ಸದಾಕಾಲ ಚಿಲುಮೆಯಂತೆ ಹೃದಯದ ಯಾವುದೋ ಒಂದು ಮೂಲೆಯಲ್ಲಿ ಚಿಮ್ಮುತ್ತಿರುತ್ತದೆ. ಆ ನೆನಪುಗಳು ಅನಂತಕುಮಾರರ ಆದರ್ಶದ ಮಾದರಿಗಳನ್ನು ನಮ್ಮದಾಗಿಸಿಕೊಂಡು ಮುನ್ನಡೆಯುವ ಸ್ಫೂರ್ತಿಯನ್ನು ಕೊಡುತ್ತವೆ.

ಅನಂತಕುಮಾರ್ ಅವರನ್ನು ನಾವು ಹಸನ್ಮುಖಿ, ಸಜ್ಜನ ರಾಜಕಾರಣಿ, ಪಕ್ಷಾತೀತ, ಜಾತ್ಯತೀತ, ಭಾಷಾತೀತ, ಅಜಾತಶತ್ರು, ನೆನಪಿನ ನಿಧಿ, ನೆನಪಿನ ಆಗರ ಎಂದೆಲ್ಲ ಕರೆಯಬಹುದು. ತಾವು ಒಮ್ಮೆ ಭೇಟಿಯಾಗಿದ್ದ ಯಾರನ್ನೇ ಆಗಲಿ, ನೆನಪಿಟ್ಟುಕೊಂಡು ಮುಂದೆಂದೋ ಅವರನ್ನು ಗುರುತಿಸಿ ಮಾತನಾಡಿಸುವ ಸಾಮರ್ಥ್ಯವಿದ್ದ ಅವರು ನೆನಪಿನ ಆಗರ. ಇವೆಲ್ಲವುಗಳ ಹೊರತಾಗಿಯೂ ಅವರೊಬ್ಬ ದಾರ್ಶನಿಕ, ನಿರಂತರತೆಯ ಹರಿಕಾರ, ಭಾಷೆಯ ಮತ್ತು ಸಾಂಸ್ಕೃತಿಕ ರಾಯಭಾರಿ. ಅನಂತಕುಮಾರರನ್ನು ನಿರಂತರತೆಯ ಹರಿಕಾರ ಎಂದು ನಾನು ಹೇಳಲು ಕಾರಣಗಳಿವೆ. ಅವರು ಯಾವುದೇ ಕೆಲಸವನ್ನು ಕೈಗೆತ್ತಿಕೊಂಡರೂ ಅದಕ್ಕೊಂದು ತಾರ್ಕಿಕ ಅಂತ್ಯವನ್ನು ನೀಡುತ್ತಿದ್ದರು. ಅದರಲ್ಲಿಯೂ ಜನೋಪಯೋಗಿ, ಜೀವನ್ಮುಖಿ ಹಾಗೂ ಸಮಾಜಮುಖಿ ಕೆಲಸಗಳನ್ನಂತೂ ನಿರಂತರವಾಗಿ ಬೆಂಬತ್ತಿ ಸಾಧಿಸುತ್ತಿದ್ದರು. ರಾಜಕೀಯ ಕ್ಷೇತ್ರದಲ್ಲಿ ಎಷ್ಟೋ ಯೋಜನೆಗಳು ಇಚ್ಛಾಶಕ್ತಿಯ ಕೊರತೆಯಿಂದ ಶಂಕುಸ್ಥಾಪನೆಯ ಹಂತದಲ್ಲಿ ನಿಂತುಬಿಡುತ್ತವೆ. ಆದರೆ, ತಮಗೆ ಸಿಕ್ಕ ಇಲಾಖೆ ಯಾವುದೇ ಇರಲಿ, ಗಮನಕ್ಕೆ ಬಿದ್ದ ಯಾವುದೇ ಕೆಲಸವಿರಲಿ, ಎಲ್ಲವನ್ನೂ ಕೊನೆಮುಟ್ಟಿಸುವ ತನಕ ನಿರಂತರವಾಗಿ ನಿರ್ವಹಿಸುವುದು ಅನಂತಕುಮಾರರ ಜಾಯಮಾನ.

ಅವರು ತಮ್ಮ ಜೀವನದುದ್ದಕ್ಕೂ ಭಗವದ್ಗೀತೆಯ ಪಠಣವನ್ನು ನಿರಂತರವಾಗಿ ರೂಢಿಸಿಕೊಂಡಿದ್ದರು. ಒಂದು ಓದಿಗೂ ನಿರಂತರತೆಯನ್ನು ಕಾಪಾಡಿಕೊಂಡು ಬರುವ ಶ್ರದ್ಧೆ ಅವರಲ್ಲಿತ್ತು. ಆ ಶ್ರದ್ಧೆಯಲ್ಲಿ ಕೃತಕೃತ್ಯತೆಯಿರುವುದು ಗಮನಾರ್ಹ. ನಾನು ಗಮನಿಸಿದ ಹಾಗೆ ಭಾರತೀಯ ಪರಂಪರೆಯಲ್ಲಿ ಕನ್ನಡಿಗರ ವಿಶ್ವಮಾನವತ್ವವನ್ನು ರೂಢಿಸಿಕೊಂಡು ಬೆಳೆಸಿ, ಬಳಸಿ, ಚಿರಸ್ಥಾಯಿಯಾಗಿಸಿದವರು ಅನಂತಕುಮಾರರು. ಅವರ ಈ ಒಂದು ತತ್ವವು ರಾಷ್ಟ್ರ ರಾಜಕಾರಣದಲ್ಲಿ ಸದಾಕಾಲ ಅವರನ್ನು ಜಾಗೃತವಾಗಿ ಇಟ್ಟಿತ್ತು. ಆದಿಕವಿ ಪಂಪ ಹೇಳಿದಂತೆ, "ಮಾನವ ಕುಲಂ ತಾನೊಂದೆ ವಲಂ" ಎಂದು ಎಲ್ಲರನ್ನೂ ಒಟ್ಟಾಗಿ ಸ್ವೀಕರಿಸಿದವರು, ಬಸವಣ್ಣ ಹೇಳಿದಂತೆ "ಇವನ್ಯಾರವ, ಇವನ್ಯಾರವ, ಇವನ್ಯಾರವ ಎಂದೆನಿಸದಿರಯ್ಯ ಇವ ನಮ್ಮವ, ಇವ ನಮ್ಮವ ಎಂದೆನಿಸಯ್ಯ" ಎಂದು ವಿಶ್ವಮಾನವ ತತ್ತ್ವವನ್ನು ಪರಂಪರೆಯಾಗಿ ಸ್ವೀಕರಿಸಿದವರು, ಕುವೆಂಪು ಹೇಳಿದ "ಮನುಜಮತ ವಿಶ್ವಪಥ" ಎಂಬ ಮಾರ್ಗದಲ್ಲಿ ಮುನ್ನಡೆದವರು ಅನಂತಕುಮಾರರು.

ಅನಂತಕುಮಾರ್ ಮೊದಲು ವಾಜಪೇಯಿ ಸರ್ಕಾರದಲ್ಲಿ ಸಂವಹನ ಇಲಾಖೆಯ ಮಂತ್ರಿಯಾಗಿದ್ದಾಗ ಕೆ.ಎಸ್.ಎಲ್ ಸ್ವಾಮಿ (ರವಿ) ಮತ್ತು ನಾನು ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದ್ದೆವು. ಮಾತುಕತೆಯ ಮಧ್ಯದಲ್ಲಿ "ಕರ್ನಾಟಕದ ಯಾವುದೇ ಒಬ್ಬ ಪ್ರತಿಭಾವಂತನಿಗೆ ದೆಹಲಿಯ ಅಥವಾ ಮುಂಬಯಿಯ ಪ್ರಮುಖ ಹುದ್ದೆಗಳು ಏಕೆ ಸಿಗುತ್ತಿಲ್ಲ?" ಎಂದು ಪ್ರಶ್ನೆ ಮಾಡಿದೆವು. ಬಹಳ ಕಾಲದ ನಂತರ ಅವರು ಮತ್ತೆ ಸಚಿವರಾದಾಗ ಬೆಂಗಳೂರಿನಲ್ಲಿ ನಾನು ಅವರನ್ನು ಮತ್ತೆ ಭೇಟಿಯಾದ ಸಂದರ್ಭದಲ್ಲಿ ನಮ್ಮ ಹಳೆಯ ಭೇಟಿಯನ್ನು ನೆನಪಿಸಿಕೊಂಡು "ನೀವು ಹೇಳಿದ್ದೊಂದು ಕೆಲಸ ಅರ್ಧಂಬರ್ಧ ಆಗಿ ಉಳಿದಿದೆಯಲ್ಲ, ಮತ್ತೊಮ್ಮೆ ದೆಹಲಿಗೆ ಬನ್ನಿ" ಎಂದು ನನ್ನನ್ನು ದೆಹಲಿಗೆ ಆಹ್ವಾನಿಸಿದರು. ದೆಹಲಿಯಲ್ಲಿ ನನ್ನನ್ನು ನೇರವಾಗಿ ಜಾವಡೇಕರ್ ಹತ್ತಿರ ಕರೆದು ಕೊಂಡು ಹೋಗಿ, ನನ್ನ ಪರಿಚಯ ಮಾಡಿಸಿ, " ಇವರು ಸಾಕಷ್ಟು ಪ್ರತಿಭಾವಂತರು ಎಂದು ನಾನು ಹೇಳಬೇಕಾಗಿಲ್ಲ, ಇವರ ಬಯೋಡೇಟಾದಲ್ಲಿಯೇ ಎಲ್ಲವೂ ಇದೆ, ಇವರನ್ನು ಚಿಲ್ಡ್ರನ್ಸ್ ಫಿಲ್ಮ್‌ಸೊಸೈಟಿಗೋ, ಅದರಂತಹ ಬೇರೊಂದು ವಿಭಾಗಕ್ಕೋ ಅಧ್ಯಕ್ಷರನ್ನಾಗಿ ಮಾಡಬೇಕು " ಎಂದು ಹೇಳಿ ಹೊರಟು ಹೋದರು. ಜಾವಡೇಕರರು ನನ್ನನ್ನು "ಡೈರೆಕ್ಟರ್ ಆಫ್ ಫಿಲ್ಮ್ ಫೆಸ್ಟಿವಲ್" ಹುದ್ದೆಗೆ ನೇಮಿಸಲು ನನ್ನ ಒಪ್ಪಿಗೆಯನ್ನು ಕೇಳಿದರು. ಇಲ್ಲಿ ಗಮನಿಸಬೇಕಾದ ಅಂಶವಿಷ್ಟೇ: ಅನಂತಕುಮಾರರು ಎಲ್ಲ ರಾಜಕಾರಣಿಗಳಂತೆ ಕೇವಲ ಆಶ್ವಾಸನೆ ಕೊಟ್ಟು ನಂತರ ಮರೆತು ಬಿಡುವವರಲ್ಲ. ನಾವು ಮರೆತಿದ್ದರೂ ಅದನ್ನು ಅವರು ತಾವೇ ನೆನಪಿಗೆ ತಂದುಕೊಂಡು ಕೆಲಸವನ್ನು ಮಾಡಿ ಮುಗಿಸುತ್ತಿದ್ದವರು.

ಅನಂತಕುಮಾರ್ ರಾಜ್ಯಕ್ಕೆ, ರಾಷ್ಟ್ರಕ್ಕೆ ನೀಡಿದ ಮಹತ್ವದ ಕೊಡುಗೆಗಳ ದೊಡ್ಡ ಪಟ್ಟಿಯನ್ನೇ ನಾವು ಮಾಡಬಹುದು. ಜನೌಷಧಿ, ಮೆಟ್ರೋ, ಚತುಷ್ಪಥ ರಸ್ತೆ, ಕಾವೇರಿ ವಿವಾದ, ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸಿದ್ದು, ಸಿಂಧೂ ದರ್ಶನ, ಬೇವು ಮಿಶ್ರಿತ ಯೂರಿಯಾ, ಬೆಂಗಳೂರು ವಿಮಾನ ನಿಲ್ದಾಣ, ಮುಂತಾದ ಅನೇಕ ಸಾಧನೆಗಳು ಎಲ್ಲರಿಗೂ ತಿಳಿದಿವೆ. ಆದರೆ ಕನ್ನಡ ಭಾಷೆಗೆ, ಕನ್ನಡ ನೆಲಜಲಗಳಿಗಾಗಿ ನಿರಂತರವಾಗಿ ಕೆಲಸ ಮಾಡಿದ ಬಹು ಮುಖ್ಯ ರಾಜಕೀಯ ಮುತ್ಸದ್ದಿ ಎಂದರೆ ಅನಂತಕುಮಾರ್ ಎಂಬ ಬಗ್ಗೆ ಎರಡನೇ ಮಾತಿಲ್ಲ.

ಎಲ್. ಹನುಮಂತಯ್ಯನವರು ಮತ್ತು ಮುಖ್ಯಮಂತ್ರಿ ಚಂದ್ರುರವರು ತಾವು ಹಿಂದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಅವರದೇ ಪಕ್ಷದ ಪ್ರಧಾನ ಮಂತ್ರಿ ಮನಮೋಹನ ಸಿಂಗರನ್ನು ಭೇಟಿಯಾಗಲು ತಿಣುಕಾಡುತ್ತಿದ್ದಾಗ ಅನಂತಕುಮಾರರು ಅದನ್ನು ನಿರಾಯಾಸವಾಗಿ ಆಗುಮಾಡಿಸಿದರು ಎಂದು ಬರೆದಿಟ್ಟಿದ್ದಾರೆ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಮತ್ತು ಮಹದಾಯಿ ವಿವಾದದ ಕುರಿತು ಕನ್ನಡಿಗ ಪ್ರತಿನಿಧಿಗಳೆಲ್ಲರೂ ಒಗ್ಗಟ್ಟಾಗಿ ತಮ್ಮ ನಿಯೋಗವನ್ನು ಕರೆದುಕೊಂಡು ಹೋಗಿ ಮಾತಾಡುವಂತೆ ಅನಂತಕುಮಾರ್ ಪ್ರೇರೇಪಿಸಿದರು. ಕನ್ನಡ ಭಾಷೆ, ಕನ್ನಡ ನೆಲ, ಕನ್ನಡ ಜಲಗಳಿಗೆ ಯಾವುದೇ ರೀತಿಯ ತೊಂದರೆ ಕಂಡು ಬಂದಾಗ ಅನಂತಕುಮಾರರು ಮುಂಚೂಣಿಯಲ್ಲಿ ನಿಂತು ಹೋರಾಡುತ್ತಿದ್ದರು.

2016 ರಲ್ಲಿ ಒಮ್ಮೆ ಅನಂತಕುಮಾರರು ಎಲ್.ಹನುಮಂತಯ್ಯ ಅವರನ್ನು ಸ್ಮೃತಿ ಇರಾನಿಯವರ ಬಳಿಗೆ ಕರೆದು ಕೊಂಡು ಹೋಗಿ ಭೇಟಿ ಮಾಡಿಸಿ ಬೆಂಗಳೂರಿನಲ್ಲಿ ಶಾಸ್ತ್ರೀಯ ಭಾಷಾ ಕಛೇರಿಯನ್ನು ಸ್ಥಾಪಿಸುವ ಎಲ್ಲ ಏರ್ಪಾಟು ಮಾಡಿಸಿದ್ದರು. ಆದರೆ ಕಾರಣಾಂತರಗಳಿಂದ ಅದು ನಿಂತೇ ಹೋಯಿತು. ಅದು ಇಂದಿಗೂ ನನೆಗುದಿಯಲ್ಲಿ ಬಿದ್ದಿದೆ. ಅನಂತಕುಮಾರ್ ಇದ್ದಿದ್ದರೆ ಅಂದೇ ಆಗಿಹೋಗುತ್ತಿದ್ದ ಕೆಲಸ ಇಂದಿಗೂ ಅಪೂರ್ಣವಾಗಿರುವುದು ಅವರ ಕರ್ತೃತ್ವ ಶಕ್ತಿಯ ಮಹತ್ವವನ್ನು ನೆನಪಿಸುತ್ತದೆ. ದೆಹಲಿಯಲ್ಲಿ ಅಖಿಲ ಭಾರತ ಕನ್ನಡ ಸಂಘಟನೆಗಳ ಸಮಾವೇಶ ನಡೆಯಿತು. ಅನಂತಕುಮಾರರು ಆ ಕಾರ್ಯಕ್ರಮದಲ್ಲಿ ಪಾದರಸದಂತೆ ಓಡಾಡಿ, ಎಲ್ಲಾ ಸಿದ್ಧತೆಗಳನ್ನು ಸ್ವತಃ ಮುಂದೆ ನಿಂತು ಮಾಡಿದರು. ರಾಜ್ಯದಿಂದ ಬರುವ ಪ್ರತಿಯೊಬ್ಬ ವ್ಯಕ್ತಿಯ ಕೆಲಸವೂ ತನ್ನ ಜವಾಬ್ದಾರಿ ಎಂಬಂತೆ ಅವರ ಕೆಲಸಗಳನ್ನು ಮಾಡಿಸಿ ಕೊಡುತ್ತಿದ್ದರು. ದೆಹಲಿಗೆ ಕಾರ್ಯನಿಮಿತ್ತ ಹೋಗಬೇಕಾಗಿ ಬಂದರೆ, ನಮಗೆ ಅಲ್ಲಿ ಅನಂತಕುಮಾರ್ ಇದ್ದಾರೆ ಎಂಬ ಧೈರ್ಯ ಮತ್ತು ನಂಬಿಕೆ. ಅವರ ಮನೆಯಲ್ಲಿಯೇ ಎಲ್ಲರಿಗೂ ವಾಸ್ತವ್ಯ ಮತ್ತು ಆತಿಥ್ಯ. ಅವರ ಮನೆ ಒಂದು ರೀತಿಯ ಕನ್ನಡದ ಛತ್ರವಾಗಿತ್ತು.


ಅಷ್ಟರ ಮಟ್ಟಿಗೆ ಭಾಷೆ ಮತ್ತು ಸಂಸ್ಕೃತಿ ಎರಡನ್ನೂ ಕೂಡ ಅಭಿಜಾತವಾಗಿ ಬೆಳೆಸಲು ಪ್ರಯತ್ನ ಪಟ್ಟ ಅಪರೂಪದ ವ್ಯಕ್ತಿ, ಅವರು. ಸರಳತೆಯನ್ನೂ ಕೂಡ ಅವರಿಂದಲೇ ನಾವು ಕಲಿಯಬೇಕು. ಕನ್ನಡ ಗೆಳೆಯರ ಬಳಗದವರು ಕುವೆಂಪು, ಬಿ.ಎಂ.ಶ್ರೀ. ಮುಂತಾದವರ ಜನ್ಮದಿನಗಳಲ್ಲಿ ಅವರ ಪ್ರತಿಮೆಗಳಿಗೆ ಹಾರ ಹಾಕುವ ಪದ್ಧತಿ ಇಟ್ಟುಕೊಂಡಿದ್ದರು. ಆ ದಿನಗಳಲ್ಲಿ ಅವರು ಸಮಯಕ್ಕೆ ಸರಿಯಾಗಿ ಅದೆಲ್ಲಿಂದಲೋ ಹಾಜರಾಗಿ ಗೆಳೆಯರ ಬಳಗದವರ ಸಂಭ್ರಮದಲ್ಲಿ ಭಾಗಿಯಾಗಿ ಮಹಾಪುರುಷರಿಗೆ ತನ್ನ ನಮನವನ್ನು ಸಲ್ಲಿಸಿ ಎಲ್ಲರಿಗೂ ಕಾಫಿ ಕೊಡಿಸಿ, ನಂತರ ತಮ್ಮ ಪಾಡಿಗೆ ತಾವು ಹೊರಟು ಹೋಗುತ್ತಿದ್ದರು. ಅವರಿಗೆ ಅದಕ್ಕೇನೂ ಒಂದು ಆಮಂತ್ರಣ ಬೇಕಾಗಿರಲಿಲ್ಲ. ಈ ರೀತಿಯಾಗಿ, ಅನಂತಕುಮಾರರು ಭಾಷೆ ಮತ್ತು ಸಂಸ್ಕೃತಿಗಳ ನಿರಂತರ ಹರಿಕಾರರಾಗಿ ಕೆಲಸ ಮಾಡಿದರು. ಬಸವಣ್ಣನವರ, ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಗಳ ಸ್ಥಾಪನೆಯ ಹಿಂದೆಯೂ ಅವರ ಶ್ರಮವಿತ್ತು.

ಕನ್ನಡ, ತೆಲುಗು, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅವರಿಗೆ ಪ್ರಾವೀಣ್ಯವಿತ್ತು. ವಿಶ್ವಸಂಸ್ಥೆಯ ವೇದಿಕೆಯಲ್ಲಿ ಎಂದಾದರೂ ಕನ್ನಡದ ಒಂದು ಮಾತು ಕೇಳಿಬಂದಿದ್ದರೆ ಅದನ್ನು ಸಾಧಿಸಿದ್ದು ಅನಂತಕುಮಾರರು. ಪ್ರಾರಂಭಿಕ ಕೆಲವೇ ಶಬ್ದಗಳನ್ನು ಮಾತ್ರ ಕನ್ನಡದಲ್ಲಿ ಆಡಿದ್ದರೂ ಅದು ವಿಶ್ವ ಮಟ್ಟದಲ್ಲಿ ಸೃಷ್ಟಿಸಿದ ಸಂಚಲನ ಅದ್ಭುತವಾದದ್ದು. ವಿಶ್ವ ಮಾನವ ತತ್ತ್ವ ಮತ್ತು ಭಾರತೀಯತೆ ನಮ್ಮಿಂದ ತ್ಯಾಗ, ಸೇವೆ ಮತ್ತು ಮಾನವೀಯತೆಗಳನ್ನು ಅಪೇಕ್ಷಿಸುತ್ತದೆ. ಇವುಗಳ ಸಾಕಾರ ರೂಪ, ಅನಂತಕುಮಾರರು. ಇಂತಹ ಅದ್ಭುತವಾದ ವ್ಯಕ್ತಿತ್ವ ಹೊಂದಿದ ಅನಂತಕುಮಾರರು ನಮಗೆ ಸ್ಫೂರ್ತಿದಾತರಾಗಿ, ನಮ್ಮ ಹೃದಯದ ಚಿಲುಮೆಯಾಗಿ ಸದಾ ಕಾಲ ನಮ್ಮನ್ನು ಪ್ರೋತ್ಸಾಹಿಸುತ್ತ ನಮ್ಮೊಡನೆ ಒಂದು ಸ್ಥಿರಶಕ್ತಿಯಾಗಿ ಉಳಿಯುತ್ತಾರೆ.




ಅನಂತಪಥ ಮಾಸಪತ್ರಿಕೆಯ 19 ನೇ ಸಂಚಿಕೆಯನ್ನು ಕರ್ನಾಟಕ ಸರ್ಕಾರದ ಕನ್ನಡ ಪ್ರಾಧಿಕಾರದ ಅಧ್ಯಕ್ಷರೂ ಖ್ಯಾತ ಚಲನಚಿತ್ರ ನಿರ್ದೇಶಕರೂ ಆದ ಶ್ರೀ ಟಿ.ಎಸ್. ನಾಗಾಭರಣ ಅವರು 22 ಜನವರಿ 2022 ರಂದು ಬಿಡುಗಡೆ ಮಾಡಿದರು.

# ಶಿಕ್ಷಣದ ಪ್ರಗತಿಯಲ್ಲಿ ಪಂಚಾಯತಿ ಸದಸ್ಯೆಯರ ಪಾತ್ರ



**ಎಂ. ಆರ್. ಅರುಣಕುಮಾರ್**
ಮುಖ್ಯ ಪ್ರಬಂಧಕರು (ನಿವೃತ್ತ), ಎಸ್.ಬಿ.ಐ. ಹಾಗೂ ಶೈಕ್ಷಣಿಕ ತರಬೇತುದಾರರು

**ಸ**ರಕಾರದ, ಸಮಾಜದ ಎಲ್ಲ ವ್ಯವಸ್ಥೆಗಳೂ ಕೆಲವು ಕಾಲ ಚೆನ್ನಾಗಿಯೇ ನಡೆದಿರುತ್ತವೆ. ಸರಕಾರಗಳು ಕಾಲಕಾಲಕ್ಕೆ ಕಾನೂನುಗಳನ್ನು ಮಾಡುತ್ತವೆ. ಆ ಕಾನೂನುಗಳು ಅಂದಿನ ಕಾಲಕ್ಕೆ ತಕ್ಕಮಟ್ಟಿಗೆ ಉಪಯುಕ್ತವೂ ಆಗಿರುತ್ತವೆ. ಆದರೆ, ಕಾಲಾನುಕ್ರಮದಲ್ಲಿ ನಾವು ನೋಡುವ ಕಾಲಕ್ಕೆ ವ್ಯವಸ್ಥೆ ಹದಗೆಟ್ಟಿರುತ್ತದೆ. ಅಂತಹ ಸಂದರ್ಭಗಳಲ್ಲಿ ತಾವು, ಏನೂ ಸರಿಯಿಲ್ಲ ಎಂದು ಗೊಣಗಾಡುತ್ತಾ ಹೊರಗಡೆಯೇ ನಿಂತಿರುತ್ತೀರಾ? ಅಥವಾ ಪರಿಸ್ಥಿತಿಯನ್ನು ಕೈಗೆ ತೆಗೆದುಕೊಂಡು ನಿಭಾಯಿಸಲು ಪ್ರಯತ್ನಿಸುತ್ತೀರಾ? ಪರಿಸ್ಥಿತಿಯನ್ನು ನಿಭಾಯಿಸುವ ನಿರ್ಧಾರ ತೆಗೆದುಕೊಳ್ಳುವುದು ಮುಂದಾಳತ್ವ. ಎದುರಿಗಿರುವ ವ್ಯವಸ್ಥೆ, ವಸ್ತು ಮತ್ತು ಸಮಯವನ್ನು ಗಮನಿಸಿ ನಮ್ಮ ಅವಶ್ಯಕತೆಗಳಿಗನುಗುಣವಾಗಿ, ನಮ್ಮ ಸಾಮರ್ಥ್ಯದ ಮೇಲೆ ಭರವಸೆಯನ್ನಿಟ್ಟುಕೊಂಡು ನಿರ್ಧಾರಗಳನ್ನು ತೆಗೆದುಕೊಂಡು ಅದರಂತೆ ನಡೆಯುವುದು ಮುಂದಾಳತ್ವ. ಮುಂದಾಳತ್ವ ಎಂಬ ಶಬ್ದವೇ ವಿಶೇಷವಾಗಿದೆ. ಮುಂದೆ ಆಳು; ಆಳು ಎಂಬ ಶಬ್ದಕ್ಕೆ ಕೆಲಸ ಮಾಡುವವನು ಮತ್ತು ದೇಶವನ್ನು, ಸಂದರ್ಭವನ್ನು, ವ್ಯವಸ್ಥೆಯನ್ನು ನಡೆಸು ಎಂಬ ಎರಡು ಅರ್ಥಗಳಿವೆ.

ನಮ್ಮ ದೇಶದ ಅಭಿವೃದ್ಧಿಯ ಜೊತೆಗೆ ಮಹಿಳೆಯರ ಸ್ಥಾನಮಾನದ ಸುಧಾರಣೆ ಆಗಬೇಕಾದರೆ ವಿದ್ಯಾಭ್ಯಾಸ ಬಹಳ ಮುಖ್ಯ. ಶಿಕ್ಷಣವೇ ಒಂದು ಹಕ್ಕು ಎಂಬ ಚಿಂತನೆಗನುಗುಣವಾಗಿ 1986 ರಲ್ಲಿಯೇ ಶಿಕ್ಷಣ ಹಕ್ಕು ಕಾಯಿದೆ (RTE) ಜಾರಿಗೆ ಬಂದಿತು.

ಶಿಕ್ಷಣದ ಹಕ್ಕು ಮಕ್ಕಳಿಗೆ ದೊರೆಯಬೇಕಾದರೆ ಪೋಷಕರು ಏನು ಮಾಡಬೇಕು? ಶಾಲಾ ಶಿಕ್ಷಣ ವ್ಯವಸ್ಥೆ ಹೇಗಿರಬೇಕು? ಶಾಲಾ ಅಭಿವೃದ್ಧಿ ಸಮಿತಿಯ ಕರ್ತವ್ಯಗಳೇನು? ಇವೆಲ್ಲವೂ ಪಂಚಾಯತಿಯ ಕಾರ್ಯವ್ಯಾಪ್ತಿಯಲ್ಲಿ ಬರುತ್ತವೆ. ಇಡೀ ಗ್ರಾಮಸಮಾಜದ ಸರ್ವಾಂಗೀಣ ಅಭಿವೃದ್ಧಿಯು ಪಂಚಾಯತಿಯ ಹೊಣೆಗಾರಿಕೆಯಾಗಿರುವುದರಿಂದ ಈ ಮೂರು ಅಂಶಗಳ ಕಡೆಗೆ ಪಂಚಾಯತಿಗಳು ಗಮನ ಹರಿಸಬೇಕು. ಶಿಕ್ಷಣ ಹಕ್ಕು ಕಾಯಿದೆಯು ಗ್ರಾಮ ಪಂಚಾಯತಿಗಳ ಮೇಲೆ ಹೊರಿಸುವ ಜವಾಬ್ದಾರಿಗಳೇನು?- (1) ಶಾಲೆಯಿಂದ ದೂರವುಳಿದ ಮಕ್ಕಳನ್ನು ಮನವೊಲಿಸಿ ಶಾಲೆಗೆ ಕರೆತರುವುದು (2)ಶಾಲೆಯ ಜಾಗ, ಕಟ್ಟಡ, ಶೌಚಾಲಯವೇ ಮುಂತಾದ ಸೌಲಭ್ಯಗಳನ್ನು ಶಾಲಾ ಅಭಿವೃದ್ಧಿ ಸಮಿತಿಗಳ ಮೂಲಕ ಒದಗಿಸುವುದು. (3) ಗ್ರಂಥಾಲಯಗಳ ಸ್ಥಾಪನೆ ಮತ್ತು ನಿರ್ವಹಣೆ ಇವೆಲ್ಲವೂ ಪಂಚಾಯತಿಗಳ ಜವಾಬ್ದಾರಿಗಳು.

ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ದೊರೆಯಬೇಕು, ಜನವಸತಿಗೆ ಅತಿ ಸಮೀಪದಲ್ಲಿ ಶಾಲೆಗಳು ಸ್ಥಾಪಿತವಾಗಬೇಕು, ಶೋಷಿತ ವರ್ಗಗಳ ವಿರುದ್ಧ ತಾರತಮ್ಯವಿರಬಾರದು, ಮಕ್ಕಳು ಇರುವಲ್ಲಿಯೇ ಅವರಿಗೆ ಶಿಕ್ಷಣ ದೊರೆಯಬೇಕು, ಶಾಲೆಗಳಲ್ಲಿ ಯಾವ ಮಕ್ಕಳಿಗೂ ಪ್ರವೇಶ ನಿರಾಕರಿಸಬಾರದು, ಮಕ್ಕಳ ಪ್ರಾಥಮಿಕ ಶಿಕ್ಷಣ ಸಂಪೂರ್ಣವಾಗಬೇಕು, ಶಾಲೆಗೆ ಉತ್ತಮವಾದ ಕಟ್ಟಡವಿರಬೇಕು, ಸಾಕಷ್ಟು ಬೋಧಕ ಸಿಬ್ಬಂದಿಯಿರಬೇಕು, ಮುಂತಾದ ಅನೇಕ ವಿಷಯಗಳು ಸ್ಥಳೀಯ ಆಡಳಿತದ ಜವಾಬ್ದಾರಿಗಳಾಗಿರುತ್ತವೆ.

ರಾಷ್ಟ್ರೀಯ ಶಿಕ್ಷಣ ಕಾಯಿದೆಯು 2020 ರಿಂದ ಇಡೀ ದೇಶಕ್ಕೆ ಅನ್ವಯವಾಗುವಂತೆ ಜಾರಿಗೆ ಬಂದಿದೆ. ಮೊದಲಿದ್ದ ಅಂಗನವಾಡಿ, ಬಾಲವಾಡಿ, ನರ್ಸರಿ, ಪ್ರಾಥಮಿಕ, ಪ್ರೌಢ ಶಿಕ್ಷಣ ವ್ಯವಸ್ಥೆಗೆ ಬದಲಾಗಿ ಎರಡನೆಯ ತರಗತಿಯವರೆಗಿನ ಮೊದಲ ಐದು ವರ್ಷಗಳ ಪೂರ್ವ ಪ್ರಾಥಮಿಕ ಶಿಕ್ಷಣ; ಮೂರು, ನಾಲ್ಕು ಮತ್ತು ಐದನೆಯ ತರಗತಿಯವರೆಗಿನ ಪ್ರಾಥಮಿಕ ಶಿಕ್ಷಣ; ಆರು ಏಳು ಎಂಟರ ವರೆಗೆ ಮಾಧ್ಯಮಿಕ ಶಿಕ್ಷಣ; ನಂತರ ಒಂಭತ್ತರಿಂದ ಹನ್ನೆರಡರವರೆಗೆ ಪ್ರೌಢ ಶಿಕ್ಷಣ ಎಂಬ ವಿಭಾಗಗಳನ್ನು ಹೊಸ ಶಿಕ್ಷಣ ಕ್ರಮದಲ್ಲಿ ಮಾಡಲಾಗಿದೆ. ಈ ಹೊಸ ಶಿಕ್ಷಣ ನೀತಿಯನ್ವಯ ಶಾಲೆಗಳಿಗೆ ಮಾನ್ಯತೆ ನೀಡಲು ಹಲವು ಮಾನಕಗಳನ್ನು ನಿರ್ಧರಿಸಲಾಗಿದೆ. ಇದರಿಂದ ಶಾಲೆಗಳ ಕಾರ್ಯವೈಖರಿಯನ್ನು ಅಳೆಯುವುದು ಸಾಧ್ಯವಾಗುತ್ತದೆ. ಪಠ್ಯಕ್ರಮದಲ್ಲಿ ಬದಲಾವಣೆಯಾದಾಗ ಶಿಕ್ಷಕರಿಗೆ ತಮ್ಮ ಕೌಶಲ್ಯಗಳ ನವೀಕರಣಕ್ಕೆ ಸೂಕ್ತ ತರಬೇತಿ ವ್ಯವಸ್ಥೆಯೂ ಹೊಸ ನೀತಿಯಲ್ಲಿ ಅಡಕವಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಸ್ಥಳೀಯ ಸಂಸ್ಥೆಗಳು (ಗ್ರಾಮ ಪಂಚಾಯತಿಗಳು), ಶೈಕ್ಷಣಿಕ ಮಂಡಲಿಗಳು, ಸರಕಾರೇತರ ಸೇವಾಸಂಸ್ಥೆಗಳು, ಸ್ವಸಹಾಯ ಸಂಘಗಳು, ಶಾಲಾ ಮೇಲುಸ್ತುವಾರಿ ಸಂಸ್ಥೆಗಳು ಮತ್ತು ರಾಜ್ಯ ಸರಕಾರಗಳ ಪಾತ್ರಗಳನ್ನು ಈ ಕಾಯಿದೆಯಲ್ಲಿ ವಿವರವಾಗಿ ನಿರೂಪಿಸಿದ್ದಾರೆ. ಗ್ರಾಮಗಳ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ ಅತಿ ದೊಡ್ಡದು, ಇದು ಗ್ರಾಮ ಪಂಚಾಯತಿಗಳ ಕರ್ತವ್ಯವೂ ಹೌದು. ಆದುದರಿಂದ ಪ್ರತಿ ಗ್ರಾಮಸಭೆ, ಪಂಚಾಯತಿ ಸಭೆಗಳಲ್ಲಿ ಶಿಕ್ಷಣದ ವಿಷಯವನ್ನು ಕಡ್ಡಾಯವಾಗಿ ಚರ್ಚಿಸಬೇಕು. ಕೇವಲ ಕಟ್ಟಡ ಮತ್ತಿತರ ಭೌತಿಕ ಸೌಲಭ್ಯಗಳ ಕುರಿತು ಮಾತ್ರವಲ್ಲ, ಮಕ್ಕಳಿಗೆ ಆತ್ಮ ವಿಶ್ವಾಸ ಹೆಚ್ಚಿಸುವ ಮೌಲಿಕವಾದ ಶಿಕ್ಷಣ ದೊರೆಯುವ ಕುರಿತೂ ಚರ್ಚಿಸಬೇಕು. ಗ್ರಾಮ ಪಂಚಾಯತಿ ಸದಸ್ಯರಿಗೆ ಈ ಕುರಿತು ಸಲಹೆ ಸೂಚನೆಗಳನ್ನು ನೀಡುವ ಅಧಿಕಾರವಿದೆ. ಇದನ್ನು ಸದಸ್ಯರು, ಅದರಲ್ಲಿಯೂ ಮಹಿಳಾ ಸದಸ್ಯರು ಸಮರ್ಪಕವಾಗಿ ಬಳಸಿಕೊಳ್ಳಬೇಕು.

ಗ್ರಾಮಗಳ ಮಟ್ಟದಲ್ಲಿ ನೂತನ ಶಿಕ್ಷಣ ನೀತಿ ಯಶಸ್ವಿಯಾಗಿ ಜಾರಿಯಾಗುತ್ತಿದೆಯೆ? ಮಕ್ಕಳ ಪ್ರತಿಭೆಯ ವಿಕಾಸಕ್ಕೆ, ಮಕ್ಕಳ ಧೈರ್ಯ ಮತ್ತು ಆತ್ಮ ವಿಶ್ವಾಸ ಹೆಚ್ಚಿಸುವ ಶಿಕ್ಷಣ ಅವರಿಗೆ ದೊರೆಯುತ್ತಿದೆಯೆ? ಶಾಲೆಗಳಲ್ಲಿ ಶೇ 100 ರಷ್ಟು ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಇದೆಯೆ? ಇವೆಲ್ಲವನ್ನೂ ಗಮನಿಸಿ ಕ್ರಮ ತೆಗೆದುಕೊಳ್ಳುವುದು ಗ್ರಾಮ ಪಂಚಾಯತಿಗಳ ಕರ್ತವ್ಯ. ಜೊತೆಗೆ ವಯಸ್ಕರ ಶಿಕ್ಷಣದ ಜವಾಬ್ದಾರಿಯೂ ಗ್ರಾಮ ಪಂಚಾಯತಿಗಳ ಮೇಲಿರುತ್ತದೆ. ಮಕ್ಕಳ ಶಿಕ್ಷಣದಲ್ಲಿ ಉಂಟಾಗುವ ಲೋಪದೋಷಗಳನ್ನು ಕಂಡುಹಿಡಿಯುವುದರಲ್ಲಿ ಮಹಿಳೆಯರು ಸಹಜವಾಗಿಯೇ ನಿಷ್ಣಾತರು. ಆದುದರಿಂದ ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಮಹಿಳಾ ಸದಸ್ಯರ ಪಾತ್ರ ಗಣನೀಯವಾಗಿರುತ್ತದೆ.

# ಸ್ವಸಹಾಯದಿಂದ ಸಬಲೀಕರಣ

**ಶ್ರೀಮತಿ ಜಾಯ್ಸ್ ಪ್ರಕಾಶ್**
ಸ್ಥಾಪಕ ನಿರ್ದೇಶಕರು, ಸುರುಚಿ ಸಂಸ್ಥೆ



**ನಾ**ನು ಪದವಿ ಕೊನೆಯ ವರ್ಷದ ವಿದ್ಯಾರ್ಥಿನಿಯಾಗಿರುವಾಗಲೇ ನನಗೆ ಬ್ಯಾಂಕಿನಲ್ಲಿ ಉದ್ಯೋಗಿಯಾಗುವ ಅವಕಾಶ ಒದಗಿ ಬಂದಿತು. ಅಂದಿನ ದಿನಗಳಲ್ಲಿ ಬ್ಯಾಂಕುಗಳಲ್ಲಿ ಸೇರಿಕೊಂಡ ನನ್ನಂಥ ಅನೇಕ ಮಹಿಳೆಯರಿಗೆ ಹಲವು ಜವಾಬ್ದಾರಿಗಳಿದ್ದವು. ನಾವು ಮಧ್ಯಮ ವರ್ಗ ಅಥವಾ ಬಡ ಕುಟುಂಬಗಳಿಂದ ಬಂದವರಾಗಿದ್ದುದರಿಂದ ಮನೆಯ ಜವಾಬ್ದಾರಿಯೂ ನಮ್ಮ ಮೇಲಿದ್ದಿತ್ತು. ಮನೆಯಿಂದ ದೂರವಿದ್ದ ಶಾಖೆಗಳಿಗೆ ವರ್ಗವಾದಾಗ ಸಂಚಾರದಲ್ಲಿಯೇ ತುಂಬ ಸಮಯ ವ್ಯರ್ಥವಾಗುತ್ತಿತ್ತು. ಹೀಗಾಗಿ, ಸಾಮಾಜಿಕವಾಗಿ ಉಪಯುಕ್ತವಾದ ಕೆಲಸಗಳಲ್ಲಿ ತೊಡಗಿಕೊಳ್ಳಬೇಕೆಂಬ ಆಸೆಯಿದ್ದರೂ ಅದು ಸಾಧ್ಯವಾಗುತ್ತಿರಲಿಲ್ಲ.

ಜೀವನವು ಯಾಂತ್ರಿಕವಾಗಿ ಕಳೆದು ಹೋಗುತ್ತಿದೆ ಎಂಬ ಹತಾಶೆ ಉಂಟಾಗುತ್ತಿದ್ದಾಗ ನನ್ನ ಜೀವನದಲ್ಲಿ ಒಂದು ದುರ್ಘಟನೆ ನಡೆಯಿತು. 2006 ರ ಸೆಪ್ಟೆಂಬರ್ ತಿಂಗಳಿನ ಒಂದು ದಿನ ನಾನು ಬ್ಯಾಂಕಿನ ಜಯನಗರ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದಾಗ ನನ್ನ ಕೌಂಟರಿನಿಂದ ಹತ್ತು ಲಕ್ಷ ರೂಪಾಯಿ ಕಳವಾಯಿತು. ಬ್ಯಾಂಕು ನನ್ನ ಮೇಲೆ ಹಣ ದುರುಪಯೋಗದ ಆರೋಪ ಹೊರಿಸಿ ನನ್ನ ಸೇವೆಯನ್ನು ಅಮಾನತಿನಲ್ಲಿರಿಸಿತು. 14 ತಿಂಗಳ ಸುದೀರ್ಘ ಹೋರಾಟದ ನಂತರ ನಾನು ಆರೋಪಮುಕ್ತಳಾಗಿ ಮತ್ತೆ ಸೇವೆಯನ್ನು ಮುಂದುವರೆಸಿದೆ. ಆ 14 ತಿಂಗಳುಗಳಲ್ಲಿ ನಾನು ಮಾನಸಿಕವಾಗಿ ತುಂಬ ಕಿರುಕುಳವನ್ನು ಅನುಭವಿಸುತ್ತಿದ್ದೆ. ಇಂತಹ ಸಂದರ್ಭದಲ್ಲಿ ಶ್ರೀ ಶ್ರೀ ರವಿಶಂಕರ ಗುರೂಜಿಯವರು ಪ್ರಾರಂಭಿಸಿದ "ದಿವ್ಯ ಕರ್ನಾಟಕ ಅಭಿಯಾನ" ಎಂಬ ಯೋಜನೆಯಲ್ಲಿ ಕಾರ್ಯಕರ್ತಳಾಗಿ ಸೇವೆ ಸಲ್ಲಿಸಲು ಪ್ರಾರಂಭಿಸಿದೆ. ಬೆಂಗಳೂರಿನ ಕೊಳೆಗೇರಿಗಳಲ್ಲಿ, ಗ್ರಾಮಾಂತರ ಪ್ರದೇಶದಲ್ಲಿ, ಗದಗ, ಕೊಪ್ಪಳ ಜಿಲ್ಲೆಗಳ ಹಳ್ಳಿಗಳಲ್ಲಿ ಮಹಿಳೆಯರಿಗೆ ವಿವಿಧ ಕೌಶಲ್ಯಗಳಲ್ಲಿ ತರಬೇತಿ ನೀಡಿ ಸಬಲೀಕರಣ ಮಾಡುವುದು ನನಗೆ ವಹಿಸಿದ ಕರ್ತವ್ಯವಾಗಿತ್ತು. ಹೀಗೆ, ಗ್ರಾಮೀಣ ಪ್ರದೇಶಗಳ ಮಹಿಳೆಯರ ಜೊತೆ ಕೆಲಸ ಮಾಡಲು ಪ್ರಾರಂಭಿಸಿದ ಮೇಲೆ ನನಗೆ ನನ್ನ ಸಾಮರ್ಥ್ಯದ ಮೇಲೆ ನಂಬಿಕೆ ಬಂದಿತು. 33 ವರ್ಷಗಳ ಸೇವಾವಧಿಯಲ್ಲಿ ತೆರೆಗೆ ಸರಿದಿದ್ದ ನನ್ನ ಆಕಾಂಕ್ಷೆ ಗರಿಗೆದರಿತು.

ಈ ಯೋಜನೆಯು ಜಾರಿಯಲ್ಲಿದ್ದ ಮೂರು ವರ್ಷಗಳ ಅವಧಿಯಲ್ಲಿ ಪ್ರತಿ ವಾರಾಂತ್ಯಗಳಲ್ಲಿ ಗದಗ ಜಿಲ್ಲೆಯ ಹಳ್ಳಿಗಳಿಗೆ ಭೇಟಿ ನೀಡಿ ಅಲ್ಲಿನ ಮಹಿಳೆಯರ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಅವರಿಗೆ ನಾನು ಕಲಿಸಿದ್ದಕ್ಕಿಂತ ಅವರಿಂದ ನಾನು ಕಲಿತಿದ್ದೇ ಹೆಚ್ಚು. ನಮ್ಮ ಗ್ರಾಮೀಣ ಭಾಗಗಳ ಮಹಿಳೆಯರಲ್ಲಿ ಅಷ್ಟೊಂದು ಕೌಶಲ್ಯಗಳಿವೆ. ಆ ಮಹಿಳೆಯರ ಜೊತೆಗೆ ನನಗೆ ಒಂದು ರೀತಿಯ ಭಾವನಾತ್ಮಕ ಸಂಬಂಧ ಬೆಳೆದಿತ್ತು.

ಇತ್ತ, ನಾನು ಬ್ಯಾಂಕಿನಲ್ಲಿ ಕಳೆದುಕೊಂಡಿದ್ದ ಗೌರವ ಮರಳಿ ದೊರೆಯಿತು. ಬ್ಯಾಂಕಿನ ಕೆಲಸದಿಂದ ಸ್ವಯಂ ನಿವೃತ್ತಿ ತೆಗೆದುಕೊಂಡು ಪೂರ್ಣಾವಧಿ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಕೊಂಡೆ. ನಿವೃತ್ತಿಯ ಸಮಯದಲ್ಲಿ ದೊರೆತ ಅಷ್ಟೂ ಹಣವನ್ನು ವಿನಿಯೋಗಿಸಿ "ಸುರುಚಿ ಎಂಪವರಿಂಗ್ ವಿಮೆನ್"ಎಂಬ ಸಂಸ್ಥೆಯನ್ನು 2011 ರಲ್ಲಿ ಪ್ರಾರಂಭಿಸಿದೆ. ಸಂಸ್ಥೆಯನ್ನು ಪ್ರಾರಂಭಿಸಿದಾಗ ನನ್ನ ಎದುರು ಎರಡು ಸ್ಪಷ್ಟ ಗುರಿಗಳಿದ್ದವು. ಪರಿಸರದ ಮೇಲೆ ಪ್ಲಾಸ್ಟಿಕ್ ಮಾಡುವ ಹಾನಿಯ ಕುರಿತು ಜನಜಾಗೃತಿ ಮೂಡಿಸುವುದು ಮತ್ತು ಆರ್ಥಿಕವಾಗಿ ಹಿಂದುಳಿದ ಶೋಷಿತ ಹೆಣ್ಣುಮಕ್ಕಳಿಗೆ ದುಡಿಯುವ ಅವಕಾಶವನ್ನು ಒದಗಿಸುವುದು ನನ್ನ ಯೋಜನೆ. ಅದಕ್ಕೆ ಸರಿಯಾಗಿ ಸರಕಾರವೇ ಏಕಬಳಕೆ ಪ್ಲಾಸ್ಟಿಕ್ ವಸ್ತುಗಳನ್ನು ನಿಷೇಧಿಸಿತು.

ಈ ಸುವರ್ಣಾವಕಾಶವನ್ನು ಬಳಸಿಕೊಂಡು ನಾವು ಪರಿಸರಸ್ನೇಹಿ ಸೆಣಬಿನ ಮತ್ತು ಹತ್ತಿಯ ಕೈಚೀಲಗಳನ್ನು ತಯಾರಿಸಲು ಪ್ರಾರಂಭಿಸಿದೆವು. ಸಾಮಾನ್ಯವಾಗಿ ಬಹುತೇಕ ಎಲ್ಲ ಮಹಿಳೆಯರಿಗೂ ಅಷ್ಟೋ ಇಷ್ಟೋ ಹೊಲಿಗೆ ಬರುತ್ತಿತ್ತು. ಕೈಚೀಲಗಳ ತಯಾರಿಕೆಗೆ ಅಂತಹ ಹೆಚ್ಚಿನ ಕೌಶಲ್ಯವೂ ಬೇಕಾಗಿರಲಿಲ್ಲ. ನಮ್ಮಲ್ಲಿ ಕೆಲಸ ಮಾಡುವ ಎಲ್ಲ ಮಹಿಳೆಯರೂ ತಮ್ಮ ತಮ್ಮ ಮನೆಗಳಿಂದಲೇ ಕೆಲಸ ಮಾಡುತ್ತಾರೆ. ಅವರಿಗೆ ಪ್ರಾರಂಭದಲ್ಲಿ ಉಚಿತ ತರಬೇತಿ ನೀಡುತ್ತೇವೆ.

ಪುಟ 5 ರಲ್ಲಿ ಮುಂದುವರೆದಿದೆ

# ವಿರೋಧ ಮೆಟ್ಟಿದ ಒಂಟಿದನಿ

ನಿರೂಪಣೆ : ಟಿ .ಎಸ್.ಗೋಪಾಲ್

1981. ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಡಾ. ಬಿ.ಎಂ.ನಂಜುಂಡಪ್ಪನವರು ಕುಲಪತಿಯಾಗಿ ನೇಮಕಗೊಂಡು ಬಂದಿದ್ದರು. ಆ ಸಮಯದಲ್ಲಿ ವಿಶ್ವವಿದ್ಯಾನಿಲಯದ ಪರೀಕ್ಷಾ ವ್ಯವಸ್ಥೆ ಹದಗೆಟ್ಟಿತ್ತು. ಮಾರ್ಚ್ ತಿಂಗಳಲ್ಲಿ ನಡೆಯಬೇಕಾದ ಪದವಿ ಪರೀಕ್ಷೆಗಳು ಒಂದಿಲ್ಲೊಂದು ಕಾರಣಕ್ಕೆ ಮುಂದೂಡಲ್ಪಟ್ಟು ಜೂನ್ ತಿಂಗಳಲ್ಲೋ ಜುಲೈ ತಿಂಗಳಲ್ಲೋ ನಡೆಯುತ್ತಿದ್ದವು. ಕಳೆದ ವರುಷ ಓದಿದ ವಿಷಯಕ್ಕೆ ಈ ವರ್ಷದ ಆಗಸ್ಟ್ ತಿಂಗಳಲ್ಲಿ ಪರೀಕ್ಷೆ ನಡೆದರೂ ಅಚ್ಚರಿಯಿಲ್ಲ. ಪರೀಕ್ಷಾ ದಿನಾಂಕ ಘೋಷಣೆಯಾದಾಗಲೆಲ್ಲ ಚಳುವಳಿ ಹೂಡಿ ಪರೀಕ್ಷೆಗಳನ್ನು ಮುಂದೂಡುವಂತೆ ವಿದ್ಯಾರ್ಥಿಗಳು ಒತ್ತಾಯಿಸುವುದೂ, ಅಧಿಕಾರಿಗಳು ಕೂಡಲೇ ಪರೀಕ್ಷೆಗಳನ್ನು ಮುಂದೂಡುವುದೂ ವಾರ್ಷಿಕ ಶೈಕ್ಷಣಿಕ ಚಟುವಟಿಕೆಗಳ ಒಂದು ಅನಿವಾರ್ಯ ಭಾಗವಾಗಿರುತ್ತಿತ್ತು.

ಹೊಸ ಕುಲಪತಿಗಳು ಅಧಿಕಾರ ವಹಿಸಿಕೊಂಡು ಒಂದು ಸಂದರ್ಶನದ ವೇಳೆ ಹೇಳಿಕೆ ಕೊಟ್ಟರು. "ವಿಶ್ವವಿದ್ಯಾನಿಲಯದ ವ್ಯವಸ್ಥೆಯಲ್ಲಿ ಶಿಸ್ತನ್ನು ಜಾರಿಗೆ ತರುವುದು ನನ್ನ ಆದ್ಯತೆ. ಈ ಶೈಕ್ಷಣಿಕ ವರ್ಷಕ್ಕೆ ನಾನು ವೇಳಾಪಟ್ಟಿ ಸಿದ್ಧಪಡಿಸಿ ಕೊಡುತ್ತೇನೆ. ಅದರಂತೆಯೇ ತರಗತಿಗಳು, ಪರೀಕ್ಷೆಗಳು ಎಲ್ಲವೂ ನಡೆಯತಕ್ಕದ್ದು, ನಡೆದೇ ನಡೆಯುತ್ತವೆ" ಎಂದರು. ಪರೀಕ್ಷಾ ದಿನಾಂಕಗಳನ್ನೂ ಅಂದೇ ಪ್ರಕಟಿಸಿದ್ದರು. ಇನ್ನೂ ಈಗ ತಾನೇ ತರಗತಿಗಳು ಪ್ರಾರಂಭವಾಗುವ ಹಂತದಲ್ಲಿವೆ. ಆಗಲೇ ಪರೀಕ್ಷೆಯ ದಿನವನ್ನು ಘೋಷಿಸುತ್ತಿದ್ದಾರೆ, ಪಾಪ, ಹೊಸದಾಗಿ ಬಂದವರಲ್ಲವೇ, ಹೀಗೆಲ್ಲ ಘೋಷಣೆ ಮಾಡುವುದು ಇದ್ದೇ ಇರುತ್ತದೆ, ಏನು ಬೇಕಾದರೂ ಹೇಳಿಕೊಳ್ಳಲಿ ಎಂದು ಎಲ್ಲರೂ ಸುಮ್ಮನಿದ್ದರು. ಸಾಮಾನ್ಯವಾಗಿ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷಾ ಪದ್ಧತಿ ಗೊಂದಲಗಳ ಆಗರವಾಗಿರುತ್ತಿತ್ತು. ಸಮಯಕ್ಕೆ ಸರಿಯಾಗಿ ಪಾಠಪ್ರವಚನಗಳಾಗುತ್ತಿರಲಿಲ್ಲ, ನಿಗದಿತ ಕಾಲಕ್ಕೆ ಪರೀಕ್ಷೆಗಳು ನಡೆಯುತ್ತಿರಲಿಲ್ಲ. ಇದನ್ನು ತಪ್ಪಿಸಿ ಸುವ್ಯವಸ್ಥೆಯನ್ನು ಕಲ್ಪಿಸಲು ಎಲ್ಲ ವಿಶ್ವವಿದ್ಯಾನಿಲಯಗಳ ಕುಲಪತಿಗಳೂ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಎಂದು ಆ ವರ್ಷ ವಿದ್ಯಾರ್ಥಿ ಪರಿಷತ್ತಿನ ರಾಜ್ಯ ಕಾರ್ಯಕಾರಿಣಿಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಲಾಗಿತ್ತು. ನಿರ್ಣಯದ ಪ್ರತಿಗಳನ್ನು ಆಯಾ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೂ ಕಳುಹಿಸಿಕೊಡಲಾಗಿತ್ತು.




ಆ ಸಂದರ್ಭದಲ್ಲಿ ಅಚ್ಯುತ ಲಿಮಯೆ ಪರಿಷತ್ತಿನ ರಾಜ್ಯ ಕಾರ್ಯದರ್ಶಿಗಳಾಗಿದ್ದರು. ಅವರನ್ನೂ ಅನಂತಕುಮಾರರನ್ನೂ ಸಂಪರ್ಕಿಸಿದ ಉಪಕುಲಪತಿ ನಂಜುಂಡಪ್ಪನವರು ತಾವು ಈಗಾಗಲೇ ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಿಸ್ತನ್ನು ಜಾರಿಗೆ ತರಲು ಕ್ರಮ ತೆಗೆದುಕೊಳ್ಳುತ್ತಿರುವುದಾಗಿಯೂ ತಮ್ಮ ಕ್ರಮಗಳನ್ನು ವಿದ್ಯಾರ್ಥಿ ಪರಿಷತ್ತು ಬೆಂಬಲಿಸಬೇಕೆಂದೂ ಕೇಳಿದ್ದರು.ಈ ಮುನ್ನವೇ ಅನಂತಕುಮಾರರಿಗೆ ಉಪಕುಲಪತಿಗಳ ಪರಿಚಯವಾಗಿತ್ತು. ಹಾಗೆ ಪರಿಚಯವಾದ ಸಂದರ್ಭವೂ ವಿಶೇಷವಾಗಿತ್ತು. ಪದವಿ ವಿದ್ಯಾರ್ಥಿಯಾಗಿದ್ದ ಕಾಲಕ್ಕೆ ಅನಂತಕುಮಾರ್ ಸ್ಕೂಟರ್ ಓಡಿಸುವುದನ್ನು ಅಭ್ಯಾಸ ಮಾಡತೊಡಗಿದ್ದರು.

ಅವರಿಗೆ ಸ್ಕೂಟರ್ ಹೇಳಿಕೊಡುತ್ತಿದ್ದವರು ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ. ಹೀಗೆ ಕಲಿಕೆಯ ಅವಧಿಯಲ್ಲೊಮ್ಮೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ಅನಂತಕುಮಾರ್ ಸ್ಕೂಟರ್ ಓಡಿಸುತ್ತಿದ್ದಾರೆ. ಅವರ ಹಿಂದೆ ಕುಳಿತ 'ತರಬೇತುದಾರ' ಕಾಗೇರಿಯವರು ಸೂಚನೆ ಕೊಡುತ್ತಿದ್ದಾರೆ. ಇಳಿಜಾರು ರಸ್ತೆಯಲ್ಲಿ ಸ್ಕೂಟರ್ ವೇಗವಾಗಿ ಓಡತೊಡಗಿತು. ಬ್ರೇಕು ಇತ್ಯಾದಿಗಳು ಇರಲೇ ಇಲ್ಲವೇನೋ ಎಂಬಂತೆ ವರ್ತಿಸತೊಡಗಿತು. ವೇಗವನ್ನು ನಿಯಂತ್ರಿಸಲು ಏನು ಮಾಡುವುದೆಂದು ತಿಳಿಯದ ಅನಂತಕುಮಾರರ ಚಡಪಡಿಕೆ ಈ ಗೊಂದಲವನ್ನು ಮತ್ತಷ್ಟು ಹೆಚ್ಚಿಸಿತು. ಹಿಂಬದಿ ಸವಾರ ಕಾಗೇರಿಯವರು ವಾಹನವನ್ನು ನಿಯಂತ್ರಿಸುವುದು ಹೇಗೆಂಬ ತಿಳುವಳಿಕೆ ಕೊಡುವ ಮುನ್ನವೇ ಇಳಿಜಾರಿನ ಕೊನೆಯಲ್ಲಿದ್ದ ಮನೆಯ ಗೇಟಿಗೆ ಸ್ಕೂಟರ್ ಢಡಾರನೆ ಗುದ್ದಿ ತಾನೇ ನಿಂತುಕೊಂಡಿತು.

ಆ ಮನೆಯೇ ಕುಲಪತಿ ನಂಜುಂಡಪ್ಪನವರ ನಿವಾಸವಾಗಿತ್ತು. ತಮ್ಮ ಸ್ಕೂಟರಿನ ಅಪರಾಧವನ್ನು ಮನ್ನಿಸಬೇಕೆಂದು ಕೇಳುವುದಕ್ಕಾಗಿಯಾದರೂ ಅನಂತಕುಮಾರ ಹೊಸ ಕುಲಪತಿಗಳನ್ನು ಭೇಟಿ ಮಾಡಬೇಕಾಯಿತು. ಅವರೊಬ್ಬ ವಿದ್ಯಾರ್ಥಿ ನಾಯಕನೆಂದು ಕುಲಪತಿಗಳಿಗೂ ತಿಳಿದಂತಾಯಿತು. ಶೈಕ್ಷಣಿಕ ಸುಧಾರಣೆಗೆ ಕುಲಪತಿಗಳು ತೆಗೆದುಕೊಳ್ಳುವ ಕ್ರಮವನ್ನು ವಿದ್ಯಾರ್ಥಿ ಪರಿಷತ್ತು ಬೆಂಬಲಿಸುವುದೆಂದು ಪರಿಷತ್ತಿನ ಪರವಾಗಿ ಅಚ್ಯುತ ಲಿಮಯೆ ಮತ್ತು ಅನಂತಕುಮಾರ ಹೇಳಿಕೆ ಕೊಟ್ಟರು. ಪರೀಕ್ಷೆಗಳನ್ನು ಸಕಾಲದಲ್ಲಿ ನಡೆಸಲು ತಮ್ಮ ಬೆಂಬಲವಿದೆಯೆಂದು ಪರಿಷತ್ತು ಭರವಸೆ ಕೊಟ್ಟಿದ್ದು ನಂಜುಂಡಪ್ಪನವರಿಗೆ ಸಂತೋಷವುಂಟುಮಾಡಿತು. ಪರೀಕ್ಷೆಗಳು ಹತ್ತಿರ ಬರುವವರೆಗೆ ಎಲ್ಲವೂ ಸರಿಯಾಗಿಯೇ ಇದ್ದವು. ಪರೀಕ್ಷಾ ದಿನಗಳು ಸಮೀಪಿಸುತ್ತಿರುವಂತೆಯೇ ಯಥಾಪ್ರಕಾರ ಚಳುವಳಿಯ ಕೂಗು ಕೇಳಿಬರತೊಡಗಿತು. ಹುಬ್ಬಳ್ಳಿಯ ವಿದ್ಯಾನಗರದ ಒಂದು ರಸ್ತೆಯಲ್ಲಿ ಈ ಕೊನೆಯಿಂದ ಆ ಕೊನೆಯ ತನಕ ಕಾಲೇಜುಗಳೇ. ಆರ್ಟ್ಸ್, ಕಾಮರ್ಸ್, ಸೈನ್ಸ್, ಇಂಜಿನಿಯರಿಂಗ್, ಮೆಡಿಕಲ್ ..ಹೀಗೆ ಎಲ್ಲ ಉನ್ನತಶಿಕ್ಷಣ ಸಂಸ್ಥೆಗಳು ಇಲ್ಲಿಯೇ ಒಟ್ಟಾಗಿವೆ.

ಒಂದು ಕಾಲೇಜಿನಲ್ಲಿ ಶುರುವಾದ ಚಳುವಳಿಯ ಗಾಳಿ ಇನ್ನೊಂದನ್ನು ತಲುಪಲು ಎಷ್ಟು ಹೊತ್ತು ಬೇಕು? ಎಲ್ಲ ವಿದ್ಯಾರ್ಥಿಗಳೂ ಪರೀಕ್ಷೆಗಳನ್ನು ಮುಂದೂಡುವ ತಮ್ಮ ಬೇಡಿಕೆಯನ್ನು ಮುಂದಿಟ್ಟು ಚಳುವಳಿ ಪ್ರಾರಂಭಿಸಿದರು. ಆಗ ಅವರಿಗೆ ಪರೀಕ್ಷೆಗಳನ್ನು ನಡೆಸಲು ವಿದ್ಯಾರ್ಥಿ ಪರಿಷತ್ತಿನ ಪರವಾಗಿ ಬೆಂಬಲ ಕೊಟ್ಟಿರುವ ವಿಷಯವನ್ನು ನೆನಪಿಸಲಾಯಿತು. ಈಗ ಹುಡುಗರ ಕೋಪ ಇತ್ತ ಕಡೆಗೆ ತಿರುಗಿತು. "ಎಲ್ಲಿದ್ದಾನೆ ಅಚ್ಯುತ ಲಿಮಯೆ? ಕರೀರಿ ಅವನನ್ನ. ಪರೀಕ್ಷೆಗೆ ಅಂವ ಕೂಡ್ತಾನಾ? ಇಲ್ಲ, ಪರೀಕ್ಷೆಗೆ ಕೂಡಾಂವರು ನಾವು. ಅಂವ ಹ್ಯಾಂಗ ಹೇಳಿಕೆ ಕೊಟ್ಟ?" ಎಂದು ಕೂಗಾಡತೊಡಗಿದರು.

ಅಂದು ಅಚ್ಯುತ ಲಿಮಯೆ ಹುಬ್ಬಳ್ಳಿಯಲ್ಲಿ ಇರಲೇ ಇಲ್ಲ. ಪೂರ್ಣಾವಧಿ ಕಾರ್ಯಕರ್ತ ಎಂದಮೇಲೆ ಒಂದು ಕಡೆ ಇರುವಂತಿಲ್ಲ. ಅಚ್ಯುತನ ಮನೆ ಹುಬ್ಬಳ್ಳಿಯಲ್ಲೇ ಇದ್ದಿತು; ಆದ್ದರಿಂದ ಅವರು ಅಲ್ಲಂತೂ ಹೆಚ್ಚು ದಿನ ಇರುವಂತೆಯೇ ಇರಲಿಲ್ಲ. ಹೀಗಾಗಿ ವಿದ್ಯಾರ್ಥಿಗಳ ಕೋಪ ಅನಂತಕುಮಾರರ ಕಡೆಗೆ ಕೇಂದ್ರೀಕೃತವಾಯಿತು. ಪತ್ರಿಕಾ ಹೇಳಿಕೆ ಕೊಟ್ಟಿದ್ದು ಅನಂತಕುಮಾರನೇ ತಾನೇ ! "ಅದೇನು ಡಿಸಿಪ್ಲಿನ್ ತರಬೇಕೆಂದಿದ್ದೀಯ, ನಾವೂ ನೋಡತೀವಿ " ಎಂದು ಅನಂತಕುಮಾರನ ಸುತ್ತ ಘೇರಾಯಿಸಿದರು. ಐದುನೂರರಿಂದ ಆರುನೂರರವರೆಗೆ ತನ್ನ ಸುತ್ತ ಸೇರಿ ಘೋಷಣೆಗಳನ್ನು ಕೂಗುತ್ತಿದ್ದ ವಿದ್ಯಾರ್ಥಿಗಳನ್ನು ಎದುರಿಸಿ ಅನಂತಕುಮಾರ್ ಒಬ್ಬರೇ ನಿಂತಿದ್ದರು! ಇಷ್ಟರಲ್ಲಿ ಕೆಲವರು ಅನಂತಕುಮಾರನ ಮೇಲೆ ಕೈಮಾಡಲೂ ಸಿದ್ಧರಾಗಿದ್ದರು. ಅನಂತಕುಮಾರ್ ಧೈರ್ಯಗೆಡದೆ ಗುಂಪನ್ನು ಎದುರಿಸಿ ನಿಂತರು. ಪರೀಕ್ಷೆಗಳನ್ನು ಸಕಾಲದಲ್ಲಿ ನಡೆಸುವ ಸಲುವಾಗಿ ವಿಶ್ವವಿದ್ಯಾಲಯದ ಕ್ರಮವನ್ನು ಬೆಂಬಲಿಸಿ ಹೇಳಿಕೆ ಕೊಟ್ಟಿರುವುದು ನಿಜವೆಂದು ಹೇಳಿದರು.

ಮತ್ತೆ ಗಲಾಟೆ ಶುರುವಾಯಿತು. "ಅದು ಹೆಂಗೆ ನೀ ಹೇಳಿಕೆ ಕೊಟ್ಟೀ? ಯಾರನ್ನ ಕೇಳಿ ಕೊಟ್ಟುಬಂದೀ? " ಎಂದು ಕೂಗತೊಡಗಿದ ಕೆಲವರು ಅನಂತಕುಮಾರರನ್ನು ತಳ್ಳಾಡತೊಡಗಿದರು. ಪರೀಕ್ಷಾವ್ಯವಸ್ಥೆ ಸುಲಲಿತವಾಗಿ ನಿಗದಿತ ವೇಳೆಯಲ್ಲಿ ನಡೆಯುವುದೇ ಸರಿ ಎನ್ನುವ ಅನಂತಕುಮಾರರ ನಿಲುವನ್ನು ಕೇಳಲು ಯಾರೂ ಸಿದ್ಧರಿರಲಿಲ್ಲ. " ನಮ್ಮನ್ನ ಕೇಳದೆ ನೀನು ಹೆಂಗ ಒಪ್ಪಿಕೊಂಡು ಬಂದೀ? ಮೊದಲು ಸ್ಟೇಟ್ ಮೆಂಟ್ ವಾಪಸ್ ತಗೋ" ಎಂದು ಏರುದನಿಯಲ್ಲಿ ಪ್ರಶ್ನಿಸತೊಡಗಿದರು. " ನೋಡರೀ ಇದು ರಾಜ್ಯ ಕಾರ್ಯಕಾರಣಿಯ ನಿರ್ಧಾರ, ನನ್ನದಲ್ಲ. ನೀವು ಹೇಳೋ ಹಂಗ ಸ್ಟೇಟ್ ಮೆಂಟ್ ವಾಪಸ್ ತೆಗೀಲಿಕ್ಕೆ ಬರೋದಿಲ್ಲ " ಎಂದ ಅನಂತಕುಮಾರರ ಮಾತನ್ನು ಯಾರೂ ಒಪ್ಪುವ ಸ್ಥಿತಿಯಲ್ಲಿರಲಿಲ್ಲ.

ಈ ವಾದವಿವಾದಗಳ ನಡುವೆ ಅನಂತಕುಮಾರ್ ತನಗೆ ಸ್ವಲ್ಪ ಮಾತನಾಡಲು ಅವಕಾಶ ಕೊಡಬೇಕೆಂದು ವಿದ್ಯಾರ್ಥಿಗಳನ್ನು ಕೇಳಿಕೊಂಡರು. " ನನಗ ಹತ್ತು ನಿಮಿಷ ಮಾತಾಡಲಿಕ್ಕ ಅವಕಾಶ ಕೊಡ್ರೀ. ನನ್ನ ಮಾತು ಕೇಳರಿ. ಆಮೇಲೆ ನಿಮಗ ಸರಿಕಂಡಹಾಂಗ ಮಾಡೋರಂತ " ಎಂದರು. ಎಲ್ಲ ವಿದ್ಯಾರ್ಥಿಗಳೂ ಒಪ್ಪಿ ಅನಂತಕುಮಾರರ ಮಾತು ಕೇಳಲು ಸಿದ್ಧರಾದರು. " ಪ್ರತಿ ವರ್ಷ ಹೀಗೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷೆಗಳ ವೇಳಾಪಟ್ಟಿ ವ್ಯತ್ಯಾಸವಾಗುತ್ತಲೇ ಬಂದಿದೆ. ಇದರ ಅನನುಕೂಲ, ತೊಂದರೆಗಳನ್ನು ಯಾರೂ ಗಮನಿಸುತ್ತಲೇ ಇಲ್ಲ. ವಿದ್ಯಾರ್ಥಿ ನಾಯಕರು ಹೀಗೆ ಪರೀಕ್ಷೆ ಮುಂದೂಡುವುದನ್ನೇ ಒಂದು ಸಂಪ್ರದಾಯ ಮಾಡಿಕೊಂಡು ಬಂದಿದ್ದಾರೆ. ಈ ಕೆಟ್ಟ ರೂಢಿಯನ್ನು ನಾವು ಮುರಿಯಬೇಕಾಗಿದೆ" ಎಂದು ಅನಂತಕುಮಾರ್ ಮಾತಿಗಾರಂಭಿಸಿದರು.

ಪುಟ 5 ರಲ್ಲಿ ಮುಂದುವರೆದಿದೆ

# ನಾಯಕತ್ವದ ಲಕ್ಷಣಗಳು

**ಜಗದೀಶ ಬಾಪಟ್**
ವಿಷಯ ತಜ್ಞರು ಹಾಗೂ ತರಬೇತುದಾರರು



**ಪ್ರ**ಜಾಪ್ರಭುತ್ವದಲ್ಲಿ ನಾಯಕತ್ವ ವಹಿಸಿಕೊಂಡವರು ತಾವು ಜನಸೇವಕ ಎಂಬ ನಮ್ರತೆಯನ್ನು ಹೊಂದಿರಬೇಕು, ಆಡಳಿತ ವ್ಯವಸ್ಥೆಯ ಚುಕ್ಕಾಣಿ ತಮ್ಮ ಕೈಯಲ್ಲಿದೆ ಎಂಬ ಎಚ್ಚರವೂ ಅವರಿಗಿರಬೇಕು. ಎರಡೂ ವಿಷಯಗಳಲ್ಲಿ ಮುಂದೆ ನಿಂತು ಕೆಲಸ ಮಾಡುವ ವಿಶೇಷ ಗುಣ ಅವರಲ್ಲಿರಬೇಕು. ಒಬ್ಬ ಒಳ್ಳೆಯ ನಾಯಕನಾಗಲು ಸಾಮಾನ್ಯವಾಗಿ ಅವನಿಗೆ ಹಲವು ವಿಶೇಷ ಗುಣಗಳಿರಬೇಕು. ನಾಯಕನಾಗಲು ಮೊದಲ ಅರ್ಹತೆ, ಅಪಾರವಾದ ಜ್ಞಾನ. ತಾವು ಕೆಲಸ ಮಾಡುವ ಕ್ಷೇತ್ರದ ಜ್ಞಾನ ಮತ್ತು ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಂಪೂರ್ಣ ಜ್ಞಾನವಿರಬೇಕು. ಅಮೆರಿಕದಲ್ಲಿ ದೊಡ್ಡ ದೊಡ್ಡ ಪ್ರತಿಷ್ಠಿತ ಕಂಪೆನಿಗಳಲ್ಲಿ ಭಾರತೀಯರು ಕೆಲಸ ಮಾಡುತ್ತಿದ್ದರೆ, ಅಂತಹ ಅನೇಕ ಕಂಪೆನಿಗಳ ನೇತೃತ್ವವನ್ನು ವಹಿಸುತ್ತಿದ್ದರೆ ಅದಕ್ಕೆ ಏಕಮೇವ ಕಾರಣ, ಅವರು ಗಳಿಸಿದ ಜ್ಞಾನ. ಅವರು ಗಳಿಸಿದ ಜ್ಞಾನವು ಇಂದು ಇಡೀ ಜಗತ್ತಿಗೆ ಉಪಯೋಗವಾಗುತ್ತಿದೆ. ವಿದ್ವತ್ತು ಇಲ್ಲದಿದ್ದರೆ ಯಾವುದೇ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವುದು ಸಾಧ್ಯವಿಲ್ಲ. ಯಾವ ದೇಶದಲ್ಲಿಯೂ ಬದುಕು ದುಸ್ತರವಾಗುತ್ತದೆ.

ನಿಮ್ಮಲ್ಲಿ ಜ್ಞಾನವಿದ್ದರೆ ನಿಮ್ಮ ಕೇತ್ರದ ಜನರು ನಿಮ್ಮನ್ನು ಗೌರವದಿಂದ ನೋಡುತ್ತಾರೆ. ನಿಮ್ಮ ಕ್ಷೇತ್ರದ ಬಗ್ಗೆ ನಿಮಗೆ ದೂರದೃಷ್ಟಿ ಇರಬೇಕು. ಮುಂದಿನ ದಿನಗಳಲ್ಲಿ ನಿಮ್ಮ ಹಳ್ಳಿಗಳಲ್ಲಿ ಆಗಬೇಕಿರುವ ಕೆಲಸದ ಬಗ್ಗೆ ಮುಂದಾಲೋಚನೆ ಮತ್ತು ಸ್ಪಷ್ಟ ಕಲ್ಪನೆ ಇರಬೇಕು. ಗ್ರಾಮವನ್ನು ಮಾದರಿಯನ್ನಾಗಿ ಮಾಡುವುದು ಹೇಗೆ ಎಂಬ ಚಿಂತನೆ ಇರಬೇಕು. ನಾಯಕನಾದವನಲ್ಲಿ ಉತ್ತಮ ಸಂವಹನ ಕೌಶಲ್ಯವಿರಬೇಕು. ರಾಜಕೀಯ ಕ್ಷೇತ್ರದಲ್ಲಿ ಚುನಾಯಿತ ಪ್ರತಿನಿಧಿಯ ಬಳಿ ಎಲ್ಲ ರೀತಿಯ ಜನರೂ ತಮ್ಮ ಕಷ್ಟಗಳನ್ನು ಹೇಳಿಕೊಂಡು ಬರುತ್ತಾರೆ. ಆದರೆ ಎಲ್ಲರಿಗೂ, ಎಲ್ಲ ಕಾಲಕ್ಕೂ ಸೂಕ್ತ ಪರಿಹಾರವನ್ನು ನೀಡುವುದು ಸಾಧ್ಯವಿಲ್ಲ. ಕೆಲವು ಸಮಸ್ಯೆಗಳ ಪರಿಹಾರಕ್ಕೆ ದೀರ್ಘಕಾಲ ಬೇಕಾಗಬಹುದು. ಇದನ್ನು ಜನರಿಗೆ ಮನವರಿಕೆಯಾಗುವ ರೀತಿಯಲ್ಲಿ ಹೇಳುವುದೊಂದು ಕಲೆ. ಅಹವಾಲು ತಂದ ಪ್ರತಿಯೊಬ್ಬರೂ ಭವಿಷ್ಯದ ಬಗ್ಗೆ ಭರವಸೆಯನ್ನು ತಳೆದು ತೃಪ್ತಿಯಿಂದ ಮರಳುವಂತೆ ವಿಷಯಗಳನ್ನು ತಿಳಿಸುವ ಚಾತುರ್ಯ ಜನಪ್ರತಿನಿಧಿಗಳಲ್ಲಿರಬೇಕು. ಜನರ ಅಭಿಪ್ರಾಯವು ಸದಾಕಾಲ ಒಂದೇ ರೀತಿ ಇರುವುದಿಲ್ಲ. ಜನಪ್ರತಿನಿಧಿಗಳಲ್ಲಿ ತಾನು ಹೇಳಿದ್ದು ನಡೆಯಲೇ ಬೇಕು ಎಂಬ ಹಠಮಾರಿತನ ಇರಬಾರದು. ಅವರಲ್ಲಿ ಸಮಯ ಬದಲಾದಂತೆ ಹೊಂದಿಕೊಳ್ಳುವ, ಬದಲಾಗುವ ಗುಣವಿರಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ಜನರು ಹೇಳಿದ್ದನ್ನು ಕೇಳುವ ತಾಳ್ಮೆಯು ನಾಯಕನಿಗೆ ಇರಬೇಕು. ನಾಯಕನಾದವನು ನುಡಿದಂತೆ ನಡೆಯಬೇಕು. ಸರಿಯಾದ ಮಾರ್ಗದಲ್ಲಿ ನಡೆದಾಗ ಮಾತ್ರ ಅವನು ಪ್ರತಿನಿಧಿಸುವ ಕ್ಷೇತ್ರದ ಜನರೂ ಅವನನ್ನು ಅನುಸರಿಸುತ್ತಾರೆ.

ಹಿಂದೆ ಮಹಾತ್ಮಾ ಗಾಂಧೀಜಿಯವರು ಉಪವಾಸ ಸತ್ಯಾಗ್ರಹ ಮಾಡಿದಾಗ ಇಡೀ ದೇಶವು ಅವರ ಜೊತೆ ಉಪವಾಸ ಮಾಡುತ್ತಿತ್ತು. ಅಂತಹ ಶಕ್ತಿ ನೇತೃತ್ವದಲ್ಲಿರಬೇಕು. ಜನರು ಸರಿಯಾದ ಮಾರ್ಗದಲ್ಲಿ ನಡೆಯುವ ನಾಯಕನ ಬೆಂಬಲಕ್ಕೆ ನಿಲ್ಲುತ್ತಾರೆ. ತಾನು ತಪ್ಪು ಮಾಡಿದಾಗ ತನ್ನ ತಪ್ಪನ್ನು ಒಪ್ಪಿಕೊಳ್ಳುವ ಹೃದಯ ವೈಶಾಲ್ಯ ನಾಯಕನಿಗಿರಬೇಕು. ಆತ ಜನರ ವಿಶ್ವಾಸವನ್ನು ಗಳಿಸಬೇಕು, ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಗುಣ ಹೊಂದಿರಬೇಕು. ಜನರಿಗಾಗಿ ಕೆಲಸ ಮಾಡುವ ಮನೋಭಾವದ ಬದಲು ಜನರೊಂದಿಗೆ ಕೆಲಸ ಮಾಡಿದರೆ ಅವನು ಒಳ್ಳೆಯ ನಾಯಕನಾಗುತ್ತಾನೆ. ನಾಯಕನು ಇತರರಿಗೆ ದಾರಿ ತೋರಿಸುವವನಾಗಬೇಕು. ತನ್ನ ಕ್ಷೇತ್ರದ ಜನರ ಆರ್ಥಿಕ ಪ್ರಗತಿಗೆ ಪೂರಕವಾದ ಆದಾಯದ ಮೂಲಗಳನ್ನು ಹುಡುಕಬೇಕು. ಚುನಾಯಿತ ಪ್ರತಿನಿಧಿಯ ಕಾರ್ಯಕಾಲ ಕೇವಲ ಐದು ವರ್ಷಗಳಿಗೆ ಸೀಮಿತವಾಗಿದ್ದರೂ ಕ್ಷೇತ್ರದ ಜನರಿಗೆ ಅನುಕೂಲಕರ ವಾತಾವರಣ ಸೃಷ್ಟಿ ಮಾಡಿದ್ದರೆ ಮತ್ತೆ ಆರಿಸಿ ಬರುವುದು ಸುಲಭವಾಗುತ್ತದೆ. ಅನಂತಕುಮಾರ್ ಅವರು ತಾವು ಮೊದಲು ಲೋಕಸಭೆಗೆ ಸ್ಪರ್ಧಿಸಿದ ಬೆಂಗಳೂರಿನ ದಕ್ಷಿಣಕ್ಷೇತ್ರದಿಂದಲೇ ಸತತ ಆರು ಬಾರಿ ಆಯ್ಕೆಯಾದರೆನ್ನುವುದು ಅವರ ನಾಯಕತ್ವದ ಯಶಸ್ಸಿಗೆ ಹಿಡಿದ ಕನ್ನಡಿಯಾಗಿದೆ.

ಗ್ರಾಮಗಳ ಬೆನ್ನೆಲುಬು ಕೃಷಿ. ಸುಧಾರಿತ ಬೇಸಾಯಕ್ರಮ, ಬೆಳೆಗಳ ಮೌಲ್ಯವರ್ಧನೆ ಮತ್ತು ಆಧುನಿಕ ಮಾರುಕಟ್ಟೆ ತಂತ್ರಗಳ ಮೂಲಕ ರೈತರ ಆದಾಯವನ್ನು ಹೆಚ್ಚಿಸುವುದು ಸಾಧ್ಯ. ಉದಾಹರಣೆಗೆ ನುಗ್ಗೆಕಾಯಿ ಕೃಷಿ. ನಮ್ಮ ಹೊಲದಲ್ಲಿ ಬೆಳೆಯುವ ನುಗ್ಗೆಸೊಪ್ಪನ್ನು ಮಾರುಕಟ್ಟೆಯಲ್ಲಿ ನೇರವಾಗಿ ಮಾರುವುದರಿಂದ ಒಂದು ಕೆಜಿ ಸೊಪ್ಪಿಗೆ 20 ರೂಪಾಯಿಗಳಿಂದ 150 ರೂಪಾಯಿಗಳವರೆಗೆ ದೊರೆಯಬಹುದು. ಆದರೆ ಅದೇ ನುಗ್ಗೆ ಸೊಪ್ಪನ್ನು ವೈಜ್ಞಾನಿಕವಾಗಿ ಒಣಗಿಸಿ ಮಾರಿದರೆ ಅದು 1000 ರೂಪಾಯಿಗಳಿಗಿಂತ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತದೆ. ಅದೇ ರೀತಿ ಕರಿಬೇವನ್ನು ಕೂಡ ಒಣಗಿಸಿ ಮಾರಿದರೆ ಹೆಚ್ಚಿನ ಬೆಲೆಗೆ ಮಾರಬಹುದು. ಈ ರೀತಿಯ ಸರಳ ಉಪಾಯಗಳನ್ನು ಮತ್ತು ಮಾರ್ಗಗಳನ್ನು ಮುಂದಾಳತ್ವ ವಹಿಸಿದವರು ತೋರಿಸಿಕೊಡಬೇಕು. ಕಡಿಮೆ ಜಾಗದಲ್ಲಿ ಹೆಚ್ಚು ಆದಾಯ ಬರುವಂತಹ ಬೆಳೆಗಳನ್ನು ಬೆಳೆದು ಇತರರಿಗೆ ಗ್ರಾಮದಲ್ಲಿ ಮಾದರಿಯಾಗಬೇಕು.

ಮೇಲೆ ಹೇಳಿದ ಎಲ್ಲ ಗುಣಗಳೂ ಮಹಿಳೆಯರಲ್ಲಿ ಸಹಜವಾಗಿರುತ್ತದೆ. ಇವುಗಳನ್ನು ಅವರು ಗುರುತಿಸಿ, ಪೋಷಿಸಿಕೊಂಡರೆ ಪಂಚಾಯತಿಯ ಸದಸ್ಯರಾಗಿ ಮಹಿಳೆಯರು ಯಶಸ್ಸು ಗಳಿಸುವುದರಲ್ಲಿ ಅನುಮಾನವಿಲ್ಲ. ಗ್ರಾಮದ ಸರ್ವತೋಮುಖ ಅಭಿವೃದ್ಧಿಯ ಕೀಲಿಕೈ ಚುನಾಯಿತ ಮಹಿಳಾ ಸದಸ್ಯೆಯರ ಕೈಯಲ್ಲಿದೆ.

ಪುಟ 3 ರಿಂದ

## ಸ್ವಸಹಾಯದಿಂದ ಸಬಲೀಕರಣ

ಅನೇಕರಿಗೆ ನಮ್ಮ ಸಂಸ್ಥೆಯಿಂದ ಆಧುನಿಕ ಹೊಲಿಗೆ ಯಂತ್ರಗಳನ್ನೂ ನೀಡುತ್ತೇವೆ. ಚೀಲಗಳ ವಿನ್ಯಾಸ ಮತ್ತು ಬೇಕಾದ ಅಳತೆಯ ಬಟ್ಟೆಗಳನ್ನು ನಾವು ಸಂಸ್ಥೆಯಿಂದ ಒದಗಿಸುತ್ತೇವೆ. ಅವರು ಹೊಲಿದ ಚೀಲಗಳ ಮಾರಾಟದ ಜವಾಬ್ದಾರಿ ನಮ್ಮದು. ನಮ್ಮ ಉದ್ದೇಶದ ಮಹತ್ವವನ್ನು ಗುರುತಿಸಿದ ಅನೇಕ ಸಂಘ ಸಂಸ್ಥೆಗಳು ನಮ್ಮ ಬೆಂಬಲಕ್ಕೆ ನಿಂತಿವೆ. ವೈಯಕ್ತಿಕವಾಗಿಯೂ ನೂರಾರು ಜನರು ನಮಗೆ ಬೆಂಬಲ ನೀಡಿದ್ದಾರೆ. ಇವೆಲ್ಲವುಗಳ ಫಲವಾಗಿ ಪ್ರತಿ ವರ್ಷ ಲಕ್ಷಾಂತರ ಚೀಲಗಳನ್ನು ತಯಾರಿಸಿ ಯೋಗ್ಯ ಬೆಲೆಯಲ್ಲಿ ಒದಗಿಸಿದ್ದೇವೆ. ಒಟ್ಟಾರೆ, ಲಕ್ಷಾಂತರ ಸಂಖ್ಯೆಯಲ್ಲಿ ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ಕಡಿಮೆ ಮಾಡಿದ ತೃಪ್ತಿ ನಮ್ಮದು.

ನಮ್ಮಲ್ಲಿ ಸುಮಾರು 50 ಜನ ಮಹಿಳೆಯರು ನೇರವಾಗಿ ಹಾಗೂ ಪರೋಕ್ಷವಾಗಿ ಕೆಲಸ ಮಾಡುತ್ತಿದ್ದು ಪ್ರತಿ ತಿಂಗಳೂ 5000 ದಿಂದ 30000 ರೂಪಾಯಿಗಳ ವರೆಗೆ ಸಂಪಾದಿಸುತ್ತಿದ್ದಾರೆ. ಅವರಿಗೆ ತಮ್ಮ ದುಡಿಮೆಯಿಂದಲೇ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಲು, ಮದುವೆ ಮಾಡಿಸಲು ಸಾಧ್ಯವಾಗಿದೆ. ಕುಟುಂಬದಲ್ಲಿ ಅವರಿಗೆ ಗೌರವದ ಸ್ಥಾನ ದೊರೆತಿದೆ. ಅಷ್ಟರ ಮಟ್ಟಿಗೆ ಕೌಟುಂಬಿಕ ಹಿಂಸೆಯೂ ಕಡಿಮೆಯಾಗಿದೆ. ನಮ್ಮ ಗ್ರಾಹಕರಾಗಿದ್ದ ಅನೇಕ ಸಂಸ್ಥೆಗಳು ನಮ್ಮ ಮಕ್ಕಳಿಗೆ ವಿದ್ಯಾರ್ಥಿ ವೇತನಗಳನ್ನು ನೀಡುತ್ತಿವೆ.

ನಮ್ಮ ಸಂಸ್ಥೆಯು ಸತತವಾಗಿ ಹಲವಾರು ವರ್ಷಗಳ ವರೆಗೆ ಬೆಂಗಳೂರು ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೆಲಸಮಾಡಿ ಅಲ್ಲಿನ ಮಹಿಳಾ ಖೈದಿಗಳಿಗೆ ಗಳಿಕೆಯ ಅವಕಾಶವನ್ನು ನೀಡಿದೆ.
ಅತ್ಯಂತ ಬಡ ಕುಟುಂಬಗಳಿಗೆ ಸೇರಿದ ಮಕ್ಕಳು ವೈದ್ಯರಾದಾಗ, ಉತ್ತಮ ವಿದ್ಯಾಭ್ಯಾಸ ಪಡೆದು ಉದ್ಯೋಗಗಳನ್ನು ಗಳಿಸಿದಾಗ ನಮ್ಮ ಶ್ರಮ ಸಾರ್ಥಕವೆನ್ನಿಸುತ್ತದೆ. ಎರಡು ವರ್ಷಗಳ ಹಿಂದೆ ಬಂದೆರಗಿದ ಕೋವಿಡ್ ಮಹಾಮಾರಿ ನಮ್ಮನ್ನು ಕಂಗೆಡಿಸಿತು. ಆ ಸಂದರ್ಭದಲ್ಲಿ ಅದಮ್ಯ ಚೇತನ ಸಂಸ್ಥೆ ನಮ್ಮ ಕೈ ಹಿಡಿಯಿತು. ನಮಗೆ ಸಾವಿರಾರು ಕೈಚೀಲಗಳನ್ನು ಮತ್ತು ಲಕ್ಷಾಂತರ ಮಾಸ್ಕ್ ಗಳನ್ನು ತಯಾರಿಸುವ ಅವಕಾಶ ಒದಗಿಸಿಕೊಟ್ಟಿತು. ಇದಲ್ಲದೆ, ಬೆಂಗಳೂರಿನಲ್ಲಿ ಅಡೆತಡೆಯಿಲ್ಲದೆ ಓಡಾಡಲು ಬೇಕಾದ ಪೋಲೀಸ್ ಪರವಾನಗಿಯನ್ನು ಕೂಡ ಒದಗಿಸಿತು. ಲಾಕ್‌ಡೌನ್ ಸಂದರ್ಭದಲ್ಲಿಯೂ ನಮ್ಮ ಮಹಿಳೆಯರಿಗೆ ಕೈತುಂಬ ಕೆಲಸ ಒದಗಿಸಿದ ಡಾ. ತೇಜಸ್ವಿನಿ ಅನಂತಕುಮಾರರಿಗೆ ನಾವು ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.


"ಸ್ವಸಹಾಯ ಉತ್ತಮ, ಪರಸ್ಪರ ಸಹಾಯ ಅತ್ಯುತ್ತಮ" ಎನ್ನುವುದು ನಮ್ಮ ಸಂಸ್ಥೆಯ ಘೋಷವಾಕ್ಯ. ನಮ್ಮಲ್ಲಿರುವ ಕೌಶಲ್ಯಗಳನ್ನು ಇತರರಿಗೆ ಉಚಿತವಾಗಿ ಕಲಿಸುತ್ತಿದ್ದೇವೆ. ಇತರರಿಂದ ನಾವೂ ಕಲಿತು ಅದನ್ನು ನಮ್ಮ ಉತ್ಪನ್ನಗಳ ಮೌಲ್ಯವರ್ಧನೆಗೆ ಬಳಸಿಕೊಳ್ಳುತ್ತಿದ್ದೇವೆ. ಸಾವಿರಾರು ಜನರಿಗೆ ಅನೇಕ ಕೌಶಲ್ಯಗಳಲ್ಲಿ ಉಚಿತ ತರಬೇತಿ ನೀಡಿದ್ದೇವೆ. ಸಂಸ್ಥೆಯ ಗಳಿಕೆಯನ್ನು ಮತ್ತೆ ಸಮಾಜದ ಹಿತಕ್ಕಾಗಿಯೇ ವಿನಿಯೋಗಿಸುತ್ತಿದ್ದೇವೆ. ಕಳೆದ ಹನ್ನೊಂದು ವರ್ಷಗಳಿಂದ ಸಾವಿರಾರು ಜನರ ಅಭಿಮಾನವನ್ನು, ವಿಶ್ವಾಸವನ್ನು ಗಳಿಸಿಕೊಂಡಿರುವ ಹೆಮ್ಮೆ ನಮ್ಮದು. ಉದ್ದೇಶ ಒಳ್ಳೆಯದಾಗಿದ್ದರೆ, ನಡೆಯುವ ಮಾರ್ಗ ಪ್ರಾಮಾಣಿಕವಿದ್ದರೆ ಅವಕಾಶಗಳು ತಾವಾಗಿಯೇ ತೆರೆದುಕೊಳ್ಳುತ್ತವೆ ಎಂಬುದಕ್ಕೆ ನಮ್ಮ ಸುರುಚಿ ಸಂಸ್ಥೆಯ ಬೆಳವಣಿಗೆಯೇ ಸಾಕ್ಷಿ.

ಪುಟ 4 ರಿಂದ

## ವಿರೋಧ ಮೆಟ್ಟಿದ ಒಂಟಿದನಿ

ಹುಬ್ಬಳ್ಳಿ ಧಾರವಾಡದಲ್ಲಿ ನಾವು ವಿದ್ಯಾರ್ಥಿಗಳು ಅನುಸರಿಸುತ್ತಿರುವ ಈ ಕೆಟ್ಟ ಪದ್ಧತಿಯಿಂದ ಉಳಿದ ಕಡೆಯ ವಿದ್ಯಾರ್ಥಿಗಳಿಗೆ ಅನುಕೂಲವಾಗಿ ಪರಿಣಮಿಸುತ್ತಾ ಇದೆ. ಇಲ್ಲಿ ಪರೀಕ್ಷೆ ಮುಂದೆ ಹಾಕಿಸಿ ನಮ್ಮ ಹುಡುಗರು ಪರೀಕ್ಷೆ ಬರೆಯುವುದೇ ಜುಲೈ ಆಗಸ್ಟ್ ತಿಂಗಳ ಹೊತ್ತಿಗೆ. ಫಲಿತಾಂಶ ಬರುವುದು ಸೆಪ್ಟೆಂಬರಿಗೋ ಅಕ್ಟೋಬರಿಗೋ. ಇಲ್ಲಿ ನಮ್ಮ ಹುಡುಗರ ಡಿಗ್ರಿ ಫಲಿತಾಂಶ ಬರುವ ಹೊತ್ತಿಗೆ ನಮ್ಮ ರಾಜ್ಯದ ಉಳಿದ ಎಲ್ಲ ಕಡೆ ವಿದ್ಯಾರ್ಥಿಗಳ ರಿಸಲ್ಟ್ ಬಂದು, ಎಲ್ಲರೂ ಕೆಲಸ ಹುಡುಕಿಕೊಂಡು ನೆಲೆ ಕಂಡಿರುತ್ತಾರೆ. ನಮ್ಮ ಹುಡುಗರು ಬರೇ ಪರೀಕ್ಷೆ ಮುಂದಕ್ಕೆ ಹಾಕುವ ಹುರುಪಿನಲ್ಲಿ ಇಡೀ ಒಂದೋ ಎರಡೋ ವರ್ಷದ ಭವಿಷ್ಯ ಕಳಕೊಂಡಿರ್ತಾರೆ. ಇವರಿಗಿಂತ ಜೂನಿಯರ್ ಹುಡುಗರ ಜೊತೆ ಇವರು ಮುಂದಿನ ವರ್ಷ ಉದ್ಯೋಗ ಮಾಡಲಿಕ್ಕೆ ಸ್ಪರ್ಧಾ ಮಾಡಬೇಕು. ಯೋಚನೆ ಮಾಡ್ರೀ. ಇದೊಂದು ವರ್ಷ ನಮಗೆ ತೊಂದರೆ ಆದರೂ ಅಡ್ಡಿಯಿಲ್ಲ. ಪರೀಕ್ಷೆ ಮುಂದೂಡಿಕೆಯ ಈ ಕೆಟ್ಟ ಅಭ್ಯಾಸ ಇಲ್ಲಿಗೇ ಬಿಡೋಣ. ನಮ್ಮ ಹುಡುಗರಿಗೆ ಉಳಿದ ಕಡೆಯ ಹುಡುಗರಿಗಿಂತ ಮುಂಚೆ ರಿಸಲ್ಟ್ ಬರೋ ಹಾಗೆ, ಬೇಗ ಕೆಲಸ ಸಿಗೋ ಹಾಗೆ ಪ್ರಯತ್ನ ಮಾಡೋಣ.

ಇಲ್ಲ, ಉಳಿದ ಮಕ್ಕಳು ಮುಂದೆ ಹೋಗಲಿ, ನಾವು ಇದ್ದ ಹಾಗೇ ಇರೋಣಂತೆ ಅನ್ನೊದಾದರೆ ಹಾಗೇ ಮಾಡ್ರೀ. ಇದೊಂದು ವರ್ಷ ನೀವೆಲ್ಲ ಸ್ವಲ್ಪ ತ್ಯಾಗ ಮಾಡಲಿಕ್ಕೆ ಸಿದ್ಧ ಅಂದರೆ ನಮ್ಮ ವಿದ್ಯಾರ್ಥಿಗಳಿಗೆ ಇನ್ನೆಂದೂ ಅನ್ಯಾಯ ಆಗೂದಿಲ್ಲ, ಇಷ್ಟೇ ನಾನು ಹೇಳುವಂಥಾದ್ದು. ನೀವು ನೀವೇ ಚರ್ಚಾ ಮಾಡ್ರಿ. ಒಂದು ನಿರ್ಧಾರ ತಗೋಳ್ರಿ" ಎಂದು ಕೈಮುಗಿದು ಸುಮ್ಮನಾದರು.ಅಲ್ಲಿದ್ದ ನೂರಾರು ವಿದ್ಯಾರ್ಥಿಗಳು ಅನಂತಕುಮಾರರ ಭಾಷಣವನ್ನು ನಿಶ್ಯಬ್ದವಾಗಿ ಆಲಿಸಿದರು. ಮತ್ತೆ ತಮ್ಮತಮ್ಮೊಳಗೇ ಚರ್ಚಿಸತೊಡಗಿದರು. ಅನಂತಕುಮಾರ್ ಹೇಳಿದ ಮಾತುಗಳಲ್ಲಿ ವಿದ್ಯಾರ್ಥಿ ಸಮುದಾಯಕ್ಕೆ ಹಾನಿಯೊದಗುವ ಅಂಶ ಒಂದಿನಿತೂ ಇರಲಿಲ್ಲ. ಇಷ್ಟು ವರ್ಷಗಳ ಕಾಲ ಪರೀಕ್ಷೆ ಮುಂದೂಡುವ ಆಟದಿಂದ ತಮ್ಮ ಭವಿಷ್ಯಕ್ಕೇ ಪೆಟ್ಟುಬೀಳುತ್ತಿತ್ತೆನ್ನುವ ಸತ್ಯ ಅವರಿಗೆ ಇದೀಗ ಗೋಚರವಾಯಿತು. ಪ್ರತಿಭಟನೆ ಅಲ್ಲಿಗೇ ನಿಂತಿತು. ನಂಜುಂಡಪ್ಪನವರ ಪೂರ್ವಯೋಜನೆಯಂತೆ ಪರೀಕ್ಷೆಗಳು ಸಕಾಲದಲ್ಲಿ ನಡೆದವು. ಅಂಥ ಪ್ರತಿಕೂಲ ಪರಿಸ್ಥಿತಿಯನ್ನು ಏಕಾಂಗಿಯಾಗಿ ನಿರ್ವಹಿಸಿದ ಅನಂತಕುಮಾರರ ಸಾಮರ್ಥ್ಯ ಮತ್ತು ಅವರ ನಾಯಕತ್ವದ ಲಕ್ಷಣಗಳನ್ನು ಕೇವಲ ಕರ್ನಾಟಕ ವಿಶ್ವವಿದ್ಯಾಲಯ, ವಿದ್ಯಾರ್ಥಿ ಪರಿಷತ್ತಿಗಳಿಗೆ ಮಾತ್ರವಲ್ಲದೆ ಇಡಿಯ ರಾಜ್ಯದ ಯುವಸಮುದಾಯಕ್ಕೇ ಪರಿಚಯಿಸಿದ ವಿಶಿಷ್ಟ ಸಂದರ್ಭ ಅದಾಗಿತ್ತು.



ದೇಗುಲದರ್ಶನ ಮಾಲಿಕೆ-7

# ಮೈಸೂರು ಜಿಲ್ಲೆಯ ಕೆಲವು ದೇವಾಲಯಗಳು

**ಈ** ತಿಂಗಳ ದೇಗುಲ ದರ್ಶನ ಮಾಲಿಕೆಯಲ್ಲಿ ನಾವು ಮೈಸೂರು ಜಿಲ್ಲೆಯ ಕೆಲವು ಪುರಾತನ ದೇವಾಲಯಗಳನ್ನು ಪರಿಚಯ ಮಾಡಿಕೊಳ್ಳಲು ಹೊರಟಿದ್ದೇವೆ.

ಮೈಸೂರು ಸಮೀಪದ ಇಲವಾಲದಿಂದ ಎಂಟು ಕಿ.ಮೀ. ದೂರದಲ್ಲಿರುವ ಗೋಮಟಗಿರಿ ಒಂದು ಪ್ರಸಿದ್ಧ ಜೈನ ಕ್ಷೇತ್ರ. ಗೊಮ್ಮಟೇಶ್ವರನ ವಿಗ್ರಹವಿರುವ ನಾಡಿನ ಕೆಲವೇ ಕ್ಷೇತ್ರಗಳಲ್ಲಿ ಗೋಮಟಗಿರಿಯೂ ಒಂದು. ಇಲ್ಲಿ ಎಂಟು ನೂರು ವರುಷಗಳಿಗೂ ಹಿಂದಿನ ಬಾಹುಬಲಿ ಮೂರ್ತಿಯನ್ನು ದರ್ಶಿಸಬಹುದು. ಮೂರ್ತಿಯು ಇಪ್ಪತ್ತು ಅಡಿ ಎತ್ತರವಿದ್ದು ನಿತ್ಯಪೂಜಾದಿಗಳಲ್ಲದೆ, ಮಸ್ತಕಾಭಿಷೇಕವೂ ನಡೆಯುತ್ತದೆ.


ಕೆ. ಆರ್. ನಗರದ ಹೊರವಲಯದ ಯಡತೊರೆಯ ಅರ್ಕೇಶ್ವರ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದ್ದು, ದೇವಾಲಯದ ಕಟ್ಟಡ, ಗೋಪುರಗಳು ಆಕರ್ಷಕವಾಗಿವೆ. ಇಲ್ಲಿನ ಶಿವಲಿಂಗ ಪುರಾತನವಾದುದು.

ಕೆ. ಆರ್. ನಗರದಿಂದ ಐದು ಕಿ.ಮೀ. ದೂರದಲ್ಲಿರುವ ಹಂಪಾಪುರದಲ್ಲಿ ದುರ್ಗಾ, ಮಾರುತಿಯ ಗುಡಿಗಳಲ್ಲದೆ ಹೊಯ್ಸಳ ಕಾಲದ ನಾರಾಯಣ ದೇವಾಲಯವೂ ಇದೆ. ಮುಂದೆ, 12 ಕಿಮೀ ದೂರದ ಭೇರ್ಯದಲ್ಲೂ ಹೊಯ್ಸಳ ನಿರ್ಮಾಣದ 13 ನೇ ಶತಮಾನದ ಕೇಶವ ದೇವಾಲಯವಿದೆ. ಎಂಟು ಕಿ.ಮೀ. ಅಂತರದಲ್ಲಿರುವ ಮಿರ್ಲೆ ಗ್ರಾಮ ಪ್ರಾಚೀನ ದೇಗುಲಗಳ ಬೀಡು. ಇಲ್ಲಿನ ಯೋಗಾನರಸಿಂಹ ಮತ್ತು ಕೇಶವ ದೇಗುಲಗಳು ಹೊಯ್ಸಳರ ಕಾಲಕ್ಕೆ ಸೇರಿದುವು. ಅಲ್ಲದೆ, ಸೀತಾಲಕ್ಷ್ಮಣ ಸಮೇತ ಕೋದಂಡರಾಮನ ಮೂರ್ತಿಗಳಿರುವ ಗುಡಿಯೂ ನೋಡತಕ್ಕದ್ದು. ಮಿರ್ಲೆಯಿಂದ ಒಂಬತ್ತು ಕಿ.ಮೀ. ದೂರದ ಚುಂಚನಕಟ್ಟೆಯಲ್ಲೂ ನದೀತೀರದಲ್ಲಿ ರಾಮ ದೇವಾಲಯವಿದ್ದು ಭಕ್ತಾದಿಗಳ ಗಮನಸೆಳೆಯುತ್ತಿದೆ.

ಚುಂಚನಕಟ್ಟೆಯಿಂದ 16 ಕಿ.ಮೀ. ದೂರದಲ್ಲಿರುವ ಗ್ರಾಮ, ಚಿಕ್ಕ ಹನಸೋಗೆ. ಇಲ್ಲಿರುವ ಜೈನಬಸದಿ ಕ್ರಿ.ಶ. ಹತ್ತನೆಯ ಶತಮಾನದಷ್ಟು ಹಳೆಯದು. ಶಾಂತಿನಾಥ, ನೇಮಿನಾಥ ಮತ್ತು ಆದಿನಾಥ ತೀರ್ಥಂಕರರ ಪ್ರತಿಮೆಗಳು ಕಣ್ಸೆಳೆಯುವಂತಿವೆ.

ಚಿಕ್ಕ ಹನಸೋಗೆಯಿಂದ 35 ಕಿ.ಮೀ. ದೂರದ ಆನೆ ಕನ್ನಂಬಾಡಿಗೆ ಹೋಗುವ ದಾರಿಯಲ್ಲಿ ಕೇರಳಾಪುರಕ್ಕೆ ಬಂದರೆ, ಅಲ್ಲೂ ವೀರಭದ್ರ, ಗಣೇಶ, ವೆಂಕಟೇಶ್ವರ ಮೊದಲಾದ ಪ್ರಾಚೀನ ಗುಡಿಗಳನ್ನು ಸಂದರ್ಶಿಸಬಹುದು.







ಇಲ್ಲಿಂದ ಮುಂದೆ ಹಾಸನಜಿಲ್ಲೆಯ ಗಡಿಯೊಳಗಿರುವ ಆನೆ ಕನ್ನಂಬಾಡಿಯಲ್ಲಿರುವ ದೇವಾಲಯದ ವಿಗ್ರಹಗಳು ಹೊಯ್ಸಳ ಶಿಲ್ಪಕಲೆಯ ಅತ್ಯುತ್ತಮ ಮಾದರಿಗಳಲ್ಲಿ ಸೇರುತ್ತವೆ. ಗಣಪತಿ, ವೇಣುಗೋಪಾಲ, ಲಕ್ಷ್ಮೀ ನರಸಿಂಹ ಮತ್ತು ಚನ್ನಕೇಶವನ ಮೂರ್ತಿಗಳು ಅತ್ಯಾಕರ್ಷಕವಾಗಿವೆ. ದೇವಾಲಯದ ಕಟ್ಟಡವನ್ನು ಪುರಾತತ್ವ ಇಲಾಖೆಯವರು ಜೀರ್ಣೋದ್ಧಾರ ಮಾಡಿರುವುದು ಸ್ತುತ್ಯರ್ಹ.

**ಕೆಂಗೇರಿ ಚಕ್ರಪಾಣಿ/ಟಿ.ಎಸ್. ಗೋಪಾಲ್**

ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ವೀಕ್ಷಿಸಿ
http://YouTube.com/AnanthkumarPratishthana










# ಕೃಷಿ ಮತ್ತು ಹಸಿರು ಜೀವನ ಶೈಲಿ

ಟಿ.ವಿ. ಶ್ರೀಕಾಂತ ಶೆಣೈ
ಸ್ಥಾಪಕ ನಿರ್ದೇಶಕರು, ಐ.ಡಿ.ಎಫ್

ಇಂದು ನಮ್ಮೆದುರು ಬೃಹದಾಕಾರವಾಗಿ ಬೆಳೆದಿರುವ ಸಮಸ್ಯೆ ಪರಿಸರ ಮಾಲಿನ್ಯ. ಹೆಜ್ಜೆಯಿಟ್ಟಲ್ಲಿ ಪ್ಲಾಸ್ಟಿಕ್ ಕಾಣಿಸುತ್ತದೆ. ಮುಂದುವರಿದವರು, ಬುದ್ಧಿವಂತರು ಎಂದು ಹೇಳಿಕೊಳ್ಳುವ ನಾವು ನಮ್ಮ ನಮ್ಮ ಮನೆ ಮತ್ತು ಕಟ್ಟಡಗಳನ್ನು ಮಾತ್ರ ಸ್ವಚ್ಛವಾಗಿರಿಸಿಕೊಳ್ಳುತ್ತೇವೆ. ಆದರೆ ಪರಿಸರವನ್ನು ಸ್ವಚ್ಛವಾಗಿರಿಸಿಕೊಳ್ಳುವ ಅನಿವಾರ್ಯತೆಯ ಕಡೆಗೆ ಗಮನ ಹರಿಸುವುದಿಲ್ಲ ಎಂಬುದು ವಿಷಾದನೀಯ. ಇಂದು ಪ್ಲಾಸ್ಟಿಕ್ ಸಮಸ್ಯೆಯ ಬಗ್ಗೆ ನಮ್ಮ ಆದ್ಯ ಗಮನ ಹರಿಯಬೇಕಾಗಿದೆ. ನಗರಗಳಂತೆ ಹಳ್ಳಿಗಳಲ್ಲಿಯೂ ಸಮಸ್ಯೆ ಉಲ್ಬಣಿಸುತ್ತಿದೆ. ನಮ್ಮ ಸಾಕು ಪ್ರಾಣಿಗಳು, ಅದರಲ್ಲಿಯೂ ಹಸುಗಳು ಪ್ಲಾಸ್ಟಿಕ್ ತ್ಯಾಜ್ಯವನ್ನು ನುಂಗಿ ಅನೇಕ ಸಮಸ್ಯೆಗಳಿಗೆ ತುತ್ತಾಗುತ್ತಿವೆ. ಕಳೆದ ಒಂದು ದಶಕದಲ್ಲಿ ನಾಲ್ಕು ವರ್ಷಗಳ ಸತತ ಬರಗಾಲ ಮತ್ತು ಎರಡು ವರ್ಷಗಳ ಅತಿವೃಷ್ಟಿ ಕಾಲದಲ್ಲಿ ನಮ್ಮ ಹಳ್ಳಿಗಳ ಆರ್ಥಿಕತೆಯನ್ನು ರಕ್ಷಿಸಿದ್ದು ಹಸುಗಳು, ಕ್ಷೀರೋದ್ಯಮ. ಹೀಗೆ ಹಸುಗಳು ಪ್ಲಾಸ್ಟಿಕ್ ಸೇವಿಸುವುದರಿಂದ ಅವುಗಳ ಪ್ರಾಣಕ್ಕೇ ಸಂಚಕಾರ ಒದಗುತ್ತಿದೆ. ಮೀನು ಪರಿಶುದ್ಧವಾದ ಆಹಾರ ಎನ್ನುತ್ತಾರೆ. ಆದರೆ ಮೀನುಗಳ ಹೊಟ್ಟೆಯಲ್ಲಿಯೂ ಪ್ಲಾಸ್ಟಿಕ್ ವಿಷದ ಅಂಶಗಳು ಸೇರಿಕೊಂಡಿರುವುದು ಕಂಡು ಬರುತ್ತಿದೆ.

ಈ ಸಮಸ್ಯೆಯು ಪ್ರಾಣಿಗಳನ್ನಷ್ಟೇ ಅಲ್ಲದೆ ಮನುಷ್ಯರ ಜೀವನದ ಮೇಲೆಯೂ ಬಹಳ ದುಷ್ಪರಿಣಾಮ ಬೀರುತ್ತಿರುವುದನ್ನು ನಾವು ಈಗಾಲೇ ನೋಡುತ್ತಿದ್ದೇವೆ. ಇದರ ಜೊತೆಗೆ ಇನ್ನೂ ಅನೇಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಇತ್ತೀಚಿನ ದಿನಗಳಲ್ಲಿ ಕೆರೆಯ ನೀರಿಗೆ ಬೆಂಕಿ ಹೊತ್ತಿಕೊಳ್ಳುವುದು, ನೊರೆ ಬರುವುದು ಮುಂತಾದ ವರದಿಗಳನ್ನು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಇದಕ್ಕೆ ಕಾರಣ ನಾವು ದಿನ ನಿತ್ಯಬಳಸುವ ಮಾರ್ಜಕಗಳು ಮತ್ತು ಕೃತಕ ರಾಸಾಯನಿಕಗಳು. ಈ ರಾಸಾಯನಿಕಗಳು ನೀರಿನ ಮೂಲಕ ನದಿಯನ್ನು ಸೇರಿ ಬೇರೆ ಬೇರೆ ಮಾರ್ಗಗಳ ಮೂಲಕ ನಮ್ಮ ದೇಹವನ್ನು ಪ್ರವೇಶಿಸುತ್ತವೆ. ಆದುದರಿಂದ ಈ ರಾಸಾಯನಿಕಗಳಿಗೆ ಪರ್ಯಾಯಗಳನ್ನೂ ಕಂಡುಕೊಳ್ಳಬೇಕು.

ನಮ್ಮ ನಾಗರಿಕ ಜೀವನ ಶೈಲಿಯಿಂದ ಅನೇಕ ಸಮಸ್ಯೆಗಳು ಉದ್ಭವಿಸುತ್ತಿವೆ. ಬರಡು ಜಮೀನು ಮತ್ತು ಅನೇಕ ವಿಚಿತ್ರ ಕಾಯಿಲೆಗಳು ಸೃಷ್ಟಿಯಾಗುತ್ತಿವೆ. ಇತ್ತೀಚಿಗೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕು ಹಾಗೂ ಕೇರಳದ ಕಾಸರಗೋಡು ಜಿಲ್ಲೆಗಳ ಹಲವು ಕುಟುಂಬಗಳಲ್ಲಿ ಕುಬ್ಜಾಕಾರದ ಮಕ್ಕಳು ಹುಟ್ಟುತ್ತಿವೆ. ಮಕ್ಕಳಿಗೆ ವಯಸ್ಸಿಗೆ ತಕ್ಕ ಬೆಳವಣಿಗೆ ಉಂಟಾಗುತ್ತಿಲ್ಲ. ಇದಕ್ಕೆ ಕಾರಣ ಆ ಪ್ರದೇಶದ ತೋಟಗಳಲ್ಲಿ ಹೆಲಿಕಾಪ್ಟರುಗಳ ಮೂಲ ವ್ಯಾಪಕವಾಗಿ ಸಿಂಪಡಿಸಿದ ಎಂಡೋಸಲ್ಫಾನ್ ಇಂದು ನಿಷೇಧಿತವಾಗಿದ್ದರೂ ಜನರು ಇಂದಿಗೂ ಇದನ್ನು ಬಳಸುತ್ತಿದ್ದಾರೆ. ಈ ರಾಸಾಯನಿಕ ಕೀಟನಾಶಕಗಳು ಹಳ್ಳಕೊಳ್ಳಗಳ ನೀರನ್ನು ಸೇರಿಕೊಂಡು ಮರಳಿ ನಮ್ಮ ಹೊಟ್ಟೆಯನ್ನೇ ಸೇರುತ್ತವೆ. ನಮ್ಮ ಮುಂದಿನ ಪೀಳಿಗೆಗಳು ಇವುಗಳ ದುಷ್ಪರಿಣಾಮಗಳನ್ನು ನೇರವಾಗಿ ಅನುಭವಿಸುವಂತಾಗುತ್ತದೆ. ನಮಗೆ ಅರಿವಿದ್ದೋ ಇಲ್ಲದೆಯೋ ಇಂತಹ ಅನೇಕ ಅನಾಹುತಕಾರಿ ಕೆಲಸಗಳನ್ನು ಮಾಡುತ್ತಿದ್ದೇವೆ. ಯಾವುದು ತಪ್ಪು, ಯಾವುದು ಸರಿ, ಯಾವುದು ಧರ್ಮ, ಯಾವುದು ಅಧರ್ಮ, ಯಾವುದು ಕೀಳು ಯಾವುದು ಮೇಲು ಎಂಬ ಎಲ್ಲವೂ ನಮಗೆ ಗೊತ್ತಿದ್ದೂ ಈ ರೀತಿಯ ಕೆಲಸಗಳನ್ನು ಮುಂದುವರಿಸಿದ್ದೇವೆ.



ಇಂದು ನಾವು ಹಸಿರು ಜೀವನಶೈಲಿಯ ಬಗ್ಗೆ ಮಾತನಾಡುತ್ತಿದ್ದೇವೆ. ಎಲ್ಲ ದೊಡ್ಡ ದೊಡ್ಡ ನಾಯಕರು ಪ್ಯಾರಿಸ್ ಮುಂತಾದ ಬೇರೆ ಬೇರೆ ಕಡೆಗಳಲ್ಲಿ ಬದಲಾದ ವಾತಾವರಣದ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ. ಈ ವಿಚಾರಗಳು ಸರ್ಕಾರದ ಮಟ್ಟದಿಂದ ಪಂಚಾಯತಿ ಮಟ್ಟಕ್ಕೆ, ಪಂಚಾಯತಿಗಳಿಂದ ಕುಟುಂಬದ ಮಟ್ಟಕ್ಕೆ ಇಳಿದು ಚರ್ಚಿತವಾಗಬೇಕು. ಕುಟುಂಬ ಮಟ್ಟದಿಂದ ನಮ್ಮ ಜೀವನಶೈಲಿಯಲ್ಲಿ ಬದಲಾವಣೆಯಾಗಬೇಕು. ಕೇವಲ ಮರು ಬಳಕೆಯಾಗುವಂತಹ ವಸ್ತುಗಳನ್ನೇ ಬಳಸಬೇಕು. ಮರುಬಳಕೆಯಾಗದ ವಸ್ತುಗಳ ಬಳಕೆಯನ್ನು ಪೂರ್ಣವಾಗಿ ನಿಲ್ಲಿಸಬೇಕು.

ನಾವೆಲ್ಲರೂ ಕೃಷಿಯ ಹಿನ್ನೆಲೆ ಇರುವವರು. ಕೃಷಿ ಜೀವನಕ್ಕೂ ಹಸಿರು ಜೀವನಕ್ಕೂ ಅವಿನಾಭಾವ ಸಂಬಂಧವಿದೆ. ಕೃಷಿ ಜೀವನವೇ ಹಸಿರು ಜೀವನ. ನಾವು ರಾಸಾಯನಿಕಗಳನ್ನು ಬಳಸದೆ ಕೃಷಿ ಮಾಡಬಹುದಾದ ವಿಧಾನಗಳನ್ನು ಅನ್ವೇಷಣೆ ಮಾಡಬೇಕು. ಸ್ವಲ್ಪ ಕಷ್ಟ ಪಟ್ಟರೆ ರಾಸಾಯನಿಕಗಳನ್ನು ಬಳಸದೆಯೇ ಕೃಷಿಯಿಂದ ನಾವು ಲಾಭಗಳಿಸಬಹುದು. ಭೂಮಿ, ನೀರು, ಪರಿಸರ ಹಾಳಾಗದ ಹಾಗೆ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ ಸುಸ್ಥಿರ ಕೃಷಿ ಪದ್ಧತಿಗಳನ್ನು ಅನುಸರಿಸಬೇಕು.

ರಾಸಾಯನಿಕಗಳಾದ ಎಂಡೋಸಲ್ಫಾನ್ ಮತ್ತು ಇತರ ಕೀಟನಾಶಕಗಳನ್ನು ಬಳಸದೆ ಅಧಿಕ ಇಳುವರಿ ಪಡೆಯುವ ಕೃಷಿ ತಂತ್ರಜ್ಞಾನಗಳು ಇಂದು ನಮ್ಮೆದುರಿಗಿವೆ. ಪಂಚಗವ್ಯ, ಬೀಜಾಮೃತ, ಜೀವಾಮೃತ, ನೀಮಾಸ್ತ್ರ, ಮುಂತಾದ ವಿಷಯಗಳು ಇಂದು ಬಳಕೆಯಲ್ಲಿವೆ. ಇವೆಲ್ಲವೂ ದನದ ಸಗಣಿ, ಮೂತ್ರ, ಕಹಿಬೇವು, ಮುಂತಾದ ಸ್ಥಳೀಯ ಸಂಪನ್ಮೂಲಗಳ ಸಾರವಾಗಿವೆ. ಇವನ್ನು ಬಳಸಿ ಕೃಷಿ ಮಾಡಿದರೆ ಯಾವ ರಾಸಾಯನಿಕಗಳನ್ನೂ ಬಳಸದೆ ಹೆಚ್ಚು ಇಳುವರಿಯನ್ನು ಪಡೆಯಬಹುದು. ಇವೆಲ್ಲವುಗಳನ್ನೂ ಪ್ರಚಾರ ಮಾಡಬೇಕಿದ್ದ ಕೃಷಿ ಇಲಾಖೆ ಮೌನವಾಗಿದೆ. ಆದುದರಿಂದ ಗ್ರಾಮ ಪಂಚಾಯತಿಗಳ ಚುನಾಯಿತ ಸದಸ್ಯರು ಆಸಕ್ತಿ ವಹಿಸಿ ಪ್ರಚಾರ ಮಾಡಬೇಕು. ಈ ಮೂಲಕ, ಗ್ರಾಮದ ರೈತರ ಮೇಲೆ ಪ್ರಭಾವವನ್ನು ಉಳಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಚುನಾಯಿತ ಸದಸ್ಯರು ಕೃಷಿ ಇಲಾಖೆಗಳಿಂದ ಹಸಿರು ಜೀವನಶೈಲಿಗೆ ಪೂರಕವಾದ ಕೃಷಿ ಪದ್ಧತಿಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು. ಪಂಚಾಯತಿ ಮಟ್ಟದಲ್ಲಿ ಈ ಬಗ್ಗೆ ಚರ್ಚೆ ನಡೆಸಬೇಕು. ಇಂದು ನಾವು ನಮ್ಮ ಮೂಲ ಕೃಷಿ ಸಂಪ್ರದಾಯಗಳಿಗೆ ಮರಳಿ ಹೊರಳಿಕೊಳ್ಳಬೇಕಾಗಿದೆ. ನಮ್ಮ ಪ್ರಯತ್ನಗಳಿಂದ ಶೇ 20 ರಷ್ಟು ಜನರು ಬದಲಾದರೂ ಮಹತ್ತರ ಫಲಿತಾಂಶಗಳನ್ನು ಪಡೆಯುವುದು ಸಾಧ್ಯ.

ಪುಟ 1 ರಿಂದ

## ವೈರಿ ಆಸ್ತಿ ವಿಧೇಯಕ – ದೇಶಕ್ಕೆ ಅನಂತ ಕಾಣಿಕೆ

ಆ ಸಂದರ್ಭದಲ್ಲಿ ಸಂಸತ್ತಿನ ಉಭಯ ಸದನಗಳಲ್ಲಿ ಸರಕಾರಕ್ಕೆ ಬಹುಮತ ಇದ್ದಿದ್ದರೂ ಲೋಕಸಭೆಯಲ್ಲಿ ಮಂಡಿಸಲಾದ ವಿಧೇಯಕವು ಸರಕಾರದ ಅಂಗ ಪಕ್ಷಗಳ ನಡುವಣ ರಾಜಕೀಯ ಹೊಂದಾಣಿಕೆಯ ಕೊರತೆಯಿಂದ ಸೆಲೆಕ್ಟ್ ಸಮಿತಿಯ ಪರಿಶೀಲನೆಗೆ ವರ್ಗಾಯಿತವಾಗಿ, ಅಂತಿಮವಾಗಿ ಬೆಳಕು ಕಾಣದೆ ನಿಷ್ಕ್ರಿಯವಾಯಿತು.

ಕೇಂದ್ರದಲ್ಲಿ 2014 ರಲ್ಲಿ ಸರಕಾರದ ಬದಲಾವಣೆಯಾಯಿತು. ಸರಕಾರವು ಜನವರಿ 7, 2016 ರಲ್ಲಿ ಮತ್ತೊಮ್ಮೆ ಸುಗ್ರೀವಾಜ್ಞೆಯನ್ನು ಹೊರಡಿಸಿತು. 2017 ರಲ್ಲಿ ಸಂಸತ್ತು ಹೊಸ ವೈರಿ ಆಸ್ತಿ ಕಾಯಿದೆಯನ್ನು ಜಾರಿಗೆ ತರುವವರೆಗೆ ಈ ಸುಗ್ರೀವಾಜ್ಞೆ ನವೀಕರಣಗೊಳ್ಳುತ್ತಿತ್ತು. 2016 ರಲ್ಲಿಯೇ ಈ ಸುಗ್ರೀವಾಜ್ಞೆಯನ್ನು ಕಾನೂನುಬದ್ಧಗೊಳಿಸುವ ವೈರಿ ಆಸ್ತಿ (ತಿದ್ದುಪಡಿ ಮತ್ತು ದೃಢೀಕರಣ) ವಿಧೇಯಕವನ್ನು ಸಂಸತ್ತಿನಲ್ಲಿ ಮಂಡಿಸಲಾಗಿದ್ದು ಅದನ್ನು ಪರಾಮರ್ಶೆಗಾಗಿ ಪರಿಶೀಲನಾ ಸಮಿತಿಗೆ ವರ್ಗಾಯಿಸಲಾಗಿತ್ತು. ಹೀಗಾಗಿ, ಈ ವಿಧೇಯಕಕ್ಕೆ 2017, ಫೆಬ್ರವರಿಯಲ್ಲಿ ಪ್ರಾರಂಭವಾದ ರಾಜ್ಯಸಭೆಯ ಅಧಿವೇಶನದಲ್ಲಿ ಅನುಮೋದನೆ ಪಡೆದುಕೊಳ್ಳದಿದ್ದರೆ ವಿಧೇಯಕವು ಮತ್ತೆ ನಿಷ್ಕ್ರಿಯವಾಗುವ ಅಪಾಯವಿತ್ತು.

ಲೋಕಸಭೆಯಲ್ಲಿ ಸ್ಪಷ್ಟಬಹುಮತವಿದ್ದಿದ್ದರೂ ಅಂದು ರಾಜ್ಯ ಸಭೆಯಲ್ಲಿ ಬಿಜೆಪಿ ಒಟ್ಟು ಸದಸ್ಯರ ಸಂಖ್ಯೆ ಕೇವಲ 55. ವಿರೋಧಪಕ್ಷಗಳ ತುಷ್ಟೀಕರಣ ರಾಜಕೀಯದ ಸುಳಿಗೆ ಸಿಕ್ಕಿ ವಿಧೇಯಕಕ್ಕೆ ರಾಜ್ಯಸಭೆಯಲ್ಲಿ ಸೋಲಾಗುವ ಸಂಭವವೇ ಹೆಚ್ಚಾಗಿತ್ತು. ಸಂಸದೀಯ ವ್ಯವಹಾರಗಳ ಸಚಿವರಾಗಿದ್ದ ಅನಂತಕುಮಾರರ ಚಾಣಾಕ್ಷತೆಗೆ ಇದೊಂದು ದೊಡ್ಡ ಸವಾಲಾಗಿತ್ತು.

ಅಂದು, ದಿನಾಂಕ 10/03/2017. ಶುಕ್ರವಾರವಾಗಿದ್ದುದರಿಂದ ಅನೇಕ ವಿರೋಧಿ ಸದಸ್ಯರು ತಮ್ಮ ಊರುಗಳಿಗೆ ತೆರಳಿದ್ದರು. ಅದೇ ಸಮಯವನ್ನು ಕಾದಿದ್ದ ಅನಂತಕುಮಾರರು ವಿಧೇಯಕವನ್ನು ರಾಜ್ಯಸಭೆಯ ಅನುಮೋದನೆಗಾಗಿ ಮಂಡಿಸಿದರು.

ಜೊತೆಗೆ 10 ಜನ ಕ್ಯಾಬಿನೆಟ್ ಸಚಿವರೂ ರಾಜ್ಯಸಭೆಯಲ್ಲಿ ಉಪಸ್ಥಿತರಿರುವಂತೆ ನೋಡಿಕೊಂಡರು. ಸ್ವಾಭಾವಿಕವಾಗಿಯೇ ಎಲ್ಲ ಬಿಜೆಪಿ ಸದಸ್ಯರೂ ಹಾಜರಿದ್ದರು. ವಿಧೇಯಕಕ್ಕೆ ಅನುಮೋದನೆ ಸಿಕ್ಕಿತು. ಮುಂದೆ, 14/03/2017 ರಲ್ಲಿ ಅದು ಲೋಕಸಭೆಯಲ್ಲಿಯೂ ಅಂಗೀಕೃತಗೊಂಡು ಅಂದೇ ರಾಷ್ಟ್ರಪತಿಗಳ ಅನುಮೋದನೆಯನ್ನೂ ಪಡೆದುಕೊಂಡು ದೇಶದ ಅಧಿಕೃತ ಕಾನೂನಾಗಿ ಜಾರಿಗೆ ಬಂದಿತು.

ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಸಂಸತ್ತಿನ ಉಭಯ ಸದನಗಳ ಮುಂದೆ ಇಂತಹ ಮಹತ್ವದ ವಿಧೇಯಕವೊಂದನ್ನು ತಂದು ತನ್ನ ರಾಜಕೀಯ ಅನುಭವಗಳನ್ನು ಕುಶಲತೆಯಿಂದ ಬಳಸಿಕೊಂಡು ಅನುಮೋದನೆ ಪಡೆದುಕೊಳ್ಳಲು ಅಂದಿನ ಸಂಸದೀಯ ವ್ಯವಹಾರ ಇಲಾಖೆಯ ಸಚಿವರಾಗಿದ್ದ ಶ್ರೀ ಅನಂತಕುಮಾರರ ಮುತ್ಸದ್ದಿತನವೇ ಕಾರಣ. ಸದಾ ದೇಶ ಮೊದಲು ಎಂದು ಪ್ರತಿಪಾದಿಸುತ್ತಿದ್ದ ಅನಂತಕುಮಾರರು ದೇಶದ ಒಂದು ಲಕ್ಷ ಕೋಟಿ ರೂಪಾಯಿಗಳ ಆಸ್ತಿಯನ್ನು ಸಂರಕ್ಷಿಸಿದರು ಎಂದರೆ ಅವರ ಪ್ರಯತ್ನಗಳ ಮಹತ್ವ ಅರಿವಾಗುತ್ತದೆ.

ಈ ತಿದ್ದುಪಡಿ ಕಾನೂನಿನ್ವಯ, 1962 ರಿಂದಲೂ ವೈರಿ ಆಸ್ತಿಗಳ ಕಸ್ಟೋಡಿಯನ್ ಸುಪರ್ದಿನಲ್ಲಿದ್ದ ಈ ಎಲ್ಲ ವೈರಿ ಆಸ್ತಿಗಳ ಮೌಲ್ಯಮಾಪನ ಮತ್ತು ವಿಲೇವಾರಿ ಮಾಡಲು ಗೃಹಸಚಿವರ ಅಧ್ಯಕ್ಷತೆಯಲ್ಲಿ ಉಪಸಮಿತಿಯೊಂದನ್ನು ರಚಿಸಲಾಗಿದೆ. ವೈರಿ ಆಸ್ತಿಗಳ ಮಾರಾಟದ ಪ್ರಕ್ರಿಯೆ ಕೂಡ ಆರಂಭವಾಗಿದೆ. ಈ ರೀತಿಯಾಗಿ, ಲಕ್ಷಾಂತರ ಕೋಟಿ ರೂಪಾಯಿಗಳ ಆಸ್ತಿಯನ್ನು ದೇಶದ ಪ್ರಗತಿಗಾಗಿ ಬಳಸಿಕೊಳ್ಳಲು ನೆರವಾದ “ವೈರಿ ಆಸ್ತಿ (ತಿದ್ದುಪಡಿ ಮತ್ತು ದೃಢೀಕರಣ) ಮಸೂದೆ” ಗೆ ಚಾಣಾಕ್ಷತನದಿಂದ ಲೋಕ ಸಭೆ ಮತ್ತು ರಾಜ್ಯಸಭೆಗಳೆರಡರ ಅನುಮೋದನೆಯನ್ನು ಪಡೆದುಕೊಳ್ಳಲು ಯಶಸ್ವಿಯಾದ ಅನಂತಕುಮಾರರಿಗೆ ದೇಶ ಕೃತಜ್ಞವಾಗಿದೆ.

ಅನಂತಪಥ

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೆಯ ತಾರೀಕು ತಪ್ಪದೆ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸಿ.

ರೂ. 1000 ನೀಡಿ ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ:

8884182415

# ಬ್ರಹ್ಮಕಮಲ

ಸಸ್ಯಲೋಕ ಪರಿಚಯ ಮಾಲಿಕೆ- 5

ಛಾಯಾ ಓಕ್ ಬಾಪಟ್



**ಸಾ**ಸ್ಸುರಿಯಾ ಓಬ್ವಲ್ಲಟಾ (Saussurea obvallata) ಎಂಬ ಸಸ್ಯಶಾಸ್ತ್ರೀಯ ಹೆಸರಿರುವ ಈ ಹೂವು ಉತ್ತರಾಖಂಡ ರಾಜ್ಯದ ರಾಜ್ಯಪುಷ್ಪವಾಗಿದೆ. ಹಿಮಾಲಯದ ಅತ್ಯಂತ ಪೂಜ್ಯ ಹೂವು ಬ್ರಹ್ಮ ಕಮಲ. ದಕ್ಷಿಣ ಭಾರತದಲ್ಲಿ ನಮಗೆ ಪರಿಚಯವಿರುವ "ಬ್ರಹ್ಮ ಕಮಲ" ಕ್ಯಾಕ್ಟಸ್ ಪ್ರಭೇದಕ್ಕೆ ಸೇರಿದ್ದು; ರಾತ್ರಿ- ಹೂಬಿಡುವ ಜಾತಿಯದು (Betlehem lily); ಅದು ನಿಜವಾದ ಬ್ರಹ್ಮಕಮಲವಲ್ಲ . ಬ್ರಹ್ಮ ಕಮಲ- ನಗಾಧಿರಾಜ ಹಿಮಾಲಯದ ಶಿರದ ಮೇಲೆ ಅರಳುವ ಅತ್ಯಂತ ಪೂಜ್ಯ ಹೂವು; ಬದರಿನಾಥ , ಕೇದಾರನಾಥ ದೇವರ ಪೂಜೆಗೆ ನಿತ್ಯ ಅರ್ಪಿತವಾಗುವ ಪವಿತ್ರ ಪುಷ್ಪವಿದು. ಎತ್ತರದ ಪರ್ವತಗಳ ಮೇಲಿನ ಮಿತಿಯಲ್ಲಿಯ (3,000 - 4,600 ಮೀ) ಸಸ್ಯ ಜೀವನಕ್ಕೆ ಇದು ಅತ್ಯುತ್ತಮ ಉದಾಹರಣೆಯಾಗಿದೆ. ಅದೃಷ್ಟವಂತರು ಮಾತ್ರ ಈ ಹೂವು ಅರಳುತ್ತಿರುವುದನ್ನು ನೋಡಬಹುದು ಮತ್ತು ಅದನ್ನು ನೋಡುವವರಿಗೆ ಸಂತೋಷ ಮತ್ತು ಸಂಪತ್ತು ಸಿಗುತ್ತದೆ' ಎಂದು ಪುರಾಣಗಳಲ್ಲಿ ಹೇಳಿದೆ.

### ಹೂವುಗಳ ರಾಜ

ಇದು ಭಾರತದ ಹಿಮಾಲಯ ಹಾಗೂ ನೈಋತ್ಯ ಚೀನಾದ ಹಿಮಾಲಯದ ಭಾಗದಲ್ಲಿ ಮಾತ್ರ ಬೆಳೆಯಬಲ್ಲದು. ಗುಂಪುಗಳಾಗಿ ಬೆಳೆಯುವ ಈ ಗಿಡಗಳು ಹಿಮಾಲಯದಲ್ಲಿ ಸುಮಾರು 4500 ಮೀಟರ್ ಎತ್ತರದಲ್ಲಿ ಕಂಡುಬರುತ್ತವೆ. ಇದು ಉತ್ತರಾಖಂಡದ ರಾಜ್ಯ ಪುಷ್ಪವಾಗಿದೆ. 3000-4800 ಮೀಟರ್ ಎತ್ತರದ ಶ್ರೇಣಿಯಲ್ಲಿ ಬೆಟ್ಟದ ಬಂಡೆಗಳು ಮತ್ತು ಹುಲ್ಲುಗಳ ನಡುವೆ ಹೂವುಗಳು ಮಧ್ಯ ಮಾನ್ಸೂನ್ (ಜುಲೈ-ಆಗಸ್ಟ್) ನಲ್ಲಿ ಸುಂದರವಾಗಿ ಅರಳುತ್ತವೆ. ಹೂವು ಅರಳುವ ಸಮಯ ಮಧ್ಯರಾತ್ರಿಯಿಂದ ಪ್ರಾರಂಭಿಸಿ ಬೆಳಗಿನ ಸೂರ್ಯೋದಯದವರೆಗೆ.

ಹೂವಿನ ಮೇಲುಭಾಗ ತಿಳಿ ನೇರಳೆ ಗುಲಾಬಿ ಮಿಶ್ರಿತ ಬಣ್ಣದಲ್ಲಿರುತ್ತದೆ. ಹಳದಿ-ಹಸಿರು ಕಾಗದ ದಂತೆ ತೆಳುವಾದ ತೊಟ್ಟುಗಳು. ಅತ್ಯಂತ ಸ್ವರ್ಗೀಯ ಪರಿಮಳವನ್ನು ಬೀರುವ ಬ್ರಹ್ಮ ಕಮಲವು ಬ್ರಹ್ಮನ ಆವಾಸಸ್ಥಾನ ಎಂದೇ ಹೇಳುತ್ತಾರೆ. ಉತ್ತರಾಖಂಡದ "ಹೂವಿನ ಕಣಿವೆ" ( ವ್ಯಾಲಿ ಆಫ್ ಫ್ಲವರ್ಸ್ ) ಯಲ್ಲೂ ಹಿಮಾಲಯ ಪರ್ವತದ ಇನ್ನು ಕೆಲವು ವಿಶಿಷ್ಟ ಪ್ರದೇಶಗಳಲ್ಲೂ ಈ ಸುಂದರ ದೈವಿಕ ಹೂವುಗಳ ಗಿಡಗಳು ಗುಂಪುಗುಂಪಾಗಿ ಬೆಳೆದು ಕಾಲಕಾಲಕ್ಕೆ ಹೂವುಗಳು ಅರಳುತ್ತವೆ. ಹೂವುಗಳನ್ನು ಅಕ್ಟೋಬರ್ ಮಧ್ಯದವರೆಗೆ ಕಾಣಬಹುದು. ಈ ಹೂವನ್ನು 'ಹಿಮಾಲಯನ್ ಹೂಗಳ ರಾಜ' ಎಂದೂ ಕರೆಯುತ್ತಾರೆ. ನಕ್ಷತ್ರದಂತಹ ಹೂವು ನೋಟದಲ್ಲಿ ತುಂಬಾ ಸುಂದರವಾಗಿರುತ್ತದೆ.

### ಆರೋಗ್ಯಲಾಭ

ಸಂಜೀವಿನಿ ಮೂಲಿಕೆಯಂತೆ ಅನೇಕ ವಿಶೇಷವಾದ ಗುಣಗಳನ್ನು ಹೊಂದಿದ ಈ ಹೂವನ್ನು ಅನೇಕ ಔಷಧಿಗಳನ್ನು ತಯಾರಿಸಲು ಬಳಸಲಾಗುತ್ತದೆ. ಕೆಮ್ಮು ಮತ್ತು ಶೀತಕ್ಕೆ ಚಿಕಿತ್ಸೆ ನೀಡುವುದರಿಂದ ಹಿಡಿದು ಲೈಂಗಿಕ ಆರೋಗ್ಯವನ್ನು ಉತ್ತೇಜಿಸುವವರೆಗೆ ಬ್ರಹ್ಮ ಕಮಲ ಅನೇಕ ಅದ್ಭುತ ಔಷಧೀಯ ಪ್ರಯೋಜನಗಳನ್ನು ಹೊಂದಿದೆ.
ಬ್ರಹ್ಮ ಕಮಲದ ವಾಸನೆಯು ತುಂಬಾ ತೀಕ್ಷ್ಣ . ಇದು ಯಕೃತ್ತಿನ ಹಾನಿಯನ್ನು ಕಡಿಮೆ ಮಾಡಲು ಮತ್ತು ದೇಹದಲ್ಲಿ ರಕ್ತದ ಪ್ರಮಾಣವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.
ಸಂಶೋಧನೆಯ ಪ್ರಕಾರ, ಬ್ರಹ್ಮ ಕಮಲದ ಹೂವು ಹಲವು ಬಗೆಯ ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳ ವಿರುದ್ಧ ಆಂಟಿಮೈಕ್ರೊಬಿಯಲ್ ಗುಣಗಳನ್ನು ಹೊಂದಿದೆ. ಅಲ್ಲದೆ ಇದು ಮೂತ್ರದ ಸೋಂಕು, ಯೀಸ್ಟ್ ಸೋಂಕು ಮತ್ತಿತರ ರೋಗಕಾರಕಗಳ ವಿರುದ್ಧವೂ ಪರಿಣಾಮಕಾರಿಯಾಗಿದೆ.

### ಅವನತಿಯ ಅಂಚಿನಲ್ಲಿ

ಇತ್ತೀಚೆಗೆ ಔಷಧಕ್ಕಾಗಿ ಸಿಕ್ಕಾಪಟ್ಟೆ ಈ ಹೂಗಿಡಗಳ ನಾಶವಾಗತೊಡಗಿವೆ. ಹೀಗಾಗಿ ಅವನತಿಯ ಅಂಚನ್ನು ತಲುಪುತ್ತಿರುವ ಈ ಅಪರೂಪದ ಹೂವಿನ ಗಿಡವನ್ನು ರಕ್ಷಿಸುವ ಕೆಲಸವನ್ನು ಉತ್ತರಾಖಂಡ ಸರ್ಕಾರವು ನಿರ್ವಹಿಸುತ್ತಿದೆ. ತನ್ನ ಔಷಧೀಯ ಗುಣದಿಂದಾಗಿಯೇ ಎಲ್ಲರ ಗಮನ ಸೆಳೆದು, ಅವನತಿಯ ಅಂಚನ್ನು ತಲುಪುತ್ತಿರುವ ಅಪರೂಪದ ಈ ದೈವಿಕಹೂವನ್ನು ರಕ್ಷಿಸಿ ಬೆಳೆಸುವುದು ಎಲ್ಲ ದೇಶವಾಸಿಗಳ ಕರ್ತವ್ಯವೂ ಆಗಿದೆ.









ಹಲವಾರು ವೀರವನಿತೆಯರಿಗೆ ಜನ್ಮವಿತ್ತ ಪಾವನಭೂಮಿ, ಭಾರತ. ಅದರಲ್ಲಿಯೂ ಮರಾಠಾ ಇತಿಹಾಸದಲ್ಲಿಯೇ ಹತ್ತಾರು ಮಹಿಳೆಯರು ರಾಜ್ಯಾಡಳಿತದಲ್ಲಿ ಪ್ರಮುಖ ಪಾತ್ರ ವಹಿಸಿರುವುದನ್ನು ನೋಡುತ್ತೇವೆ. ಇಂತಹ ವೀರವನಿತೆಯರ ಸಾಲಿನಲ್ಲಿ ಅಹಲ್ಯಾಬಾಯಿ ಹೋಳ್ಕರ್ ಹೆಸರು ಪ್ರಮುಖವಾಗಿದೆ.

### ಚೋಂಡಿಯ ಪುಟ್ಟ ಬಾಲಕಿ

ಮಲ್ಹಾರ ರಾವ್ ಹೋಳ್ಕರ್ ಮಾಲ್ವಾದಲ್ಲಿ ಪೇಶ್ವೆ ಒಂದನೇ ಬಾಜೀರಾಯನ ಸುಬೇದಾರನಾಗಿದ್ದ. 1733 ರಲ್ಲಿ ಒಮ್ಮೆ ಆತನು ಪುಣೆ ನಗರಕ್ಕೆ ಹೋಗುತ್ತ ಮಾರ್ಗಮಧ್ಯದಲ್ಲಿ ಜಮಖೇಡದ ಚೋಂಡಿ ಎಂಬ ಊರಿನಲ್ಲಿ ತಂಗಬೇಕಾಯಿತು. ಆ ಸಂದರ್ಭದಲ್ಲಿ ಆತ ಹಳ್ಳಿಯ ದೇವಾಲಯವೊಂದರಲ್ಲಿ ದೇವರ ಸೇವೆಯಲ್ಲಿ ನಿರತಳಾಗಿದ್ದ ಎಂಟು ವರ್ಷದ ಪುಟ್ಟ ಬಾಲಕಿ ಅಹಲ್ಯಾಬಾಯಿಯನ್ನು ಕಂಡ. ಆಕೆಯ ತೇಜಸ್ಸು ಮತ್ತು ಸದ್ಗುಣಗಳಿಂದ ಆಕರ್ಷಿತನಾಗಿ ಆಕೆಯನ್ನು ತನ್ನ ಮಗನಾದ ಖಂಡೇರಾವ್ ಹೋಳ್ಕರನೊಡನೆ ಮದುವೆ ಮಾಡಿಸಿದ. ಈ ರೀತಿಯಾಗಿ ಚೋಂಡಿಯ ಪಾಟೀಲನಾಗಿದ್ದ ಧನಗರ್ ಕುಟುಂಬದ ಮಂಕೋಜಿ ಸಿಂಧ್ಯಾನ ಮಗಳು, ಅಹಲ್ಯಾಬಾಯಿ ಪ್ರತಿಷ್ಠಿತ ಹೋಳ್ಕರ್‌ಕುಟುಂಬವನ್ನು ಸೊಸೆಯಾಗಿ ಪ್ರವೇಶಿಸುತ್ತಾಳೆ.

ಮರಾಠಾ ದೊರೆಗಳು ಒಂದಲ್ಲ ಒಂದು ಯುದ್ಧದಲ್ಲಿ ನಿರತರಾಗಿದ್ದ ಕಾಲವದು. ತನ್ನ ಪತಿಯೂ ಮಾವನೂ ಯುದ್ಧದಲ್ಲಿ ಸದಾ ನಿರತರಾಗಿದ್ದುದರಿಂದ ಅಹಲ್ಯಾಬಾಯಿ ಅವರಿಗೆ ರಾಜ್ಯಾಡಳಿತದಲ್ಲಿ ನೆರವಾಗುತ್ತಿದ್ದಳು. ಮಹಿಳೆಯರಿಗೆ ಶಿಕ್ಷಣವು ಅಪರೂಪವಾಗಿದ್ದ ಕಾಲದಲ್ಲಿ ಆಕೆ ಓದು ಬರಹ ಕಲಿತು ಇತರ ಹೆಣ್ಣು ಮಕ್ಕಳಿಗೆ ಮಾದರಿಯಾಗಿದ್ದಳು. ಜೊತೆಗೆ, ರಾಜ್ಯಾಡಳಿತ ಮತ್ತು ಕುದುರೆ ಸವಾರಿ ಮುಂತಾದ ಸಮರಕಲೆಗಳಲ್ಲಿಯೂ ಪ್ರಾವೀಣ್ಯವನ್ನು ಹೊಂದಿದ್ದಳು. ಈ ಮಧ್ಯೆ, ಅಹಲ್ಯಾಬಾಯಿಯು ಮಾಲೇ ರಾವ್ ಎಂಬ ಮಗನಿಗೂ ಮುಕ್ತಾಬಾಯಿ ಎಂಬ ಮಗಳಿಗೂ ಜನ್ಮ ನೀಡಿದಳು.

### ರಾಜ್ಯಭಾರದ ಹೊಣೆ

1754 ರಲ್ಲಿ ಕುಂಭೇರ್ ಕೋಟೆಯ ಮುತ್ತಿಗೆಯ ಸಂದರ್ಭದಲ್ಲಿ ಪತಿ ಖಂಡೇರಾವ್ ಅವಘಡಕ್ಕೆ ತುತ್ತಾಗಿ ಮರಣಹೊಂದಿದ. ಇದರಿಂದ ತೀವ್ರ ದುಃಖಿತಳಾದ ಅಹಲ್ಯಾಬಾಯಿ ಸಹಗಮನ ಮಾಡಲೆತ್ನಿಸಿದಾಗ ಮಾವ ಮಲ್ಹಾರಿ ರಾವ್ ಆಕೆಯನ್ನು ತಡೆದು ರಾಜ್ಯಾಡಳಿತದಲ್ಲಿ ತನಗೆ ನೆರವಾಗುವಂತೆ ಮನವೊಲಿಸುತ್ತಾರೆ. ಮುಂದೆ 1766 ರಲ್ಲಿ ಮಾವನೂ 1767 ರಲ್ಲಿ ಸದಾ ಕಾಯಿಲೆ ಪ್ರಕೃತಿಯವನಾಗಿದ್ದ ತನ್ನ ಮಗನೂ ನಿಧನರಾದಾಗ ಅಹಲ್ಯಾಬಾಯಿ ರಾಜ್ಯಾಡಳಿತದ ಸೂತ್ರವನ್ನು ತನ್ನ ಕೈಗೆ ತೆಗೆದುಕೊಳ್ಳುತ್ತಾಳೆ.

ಮಹಿಳೆಯೊಬ್ಬರು ರಾಜ್ಯಾಡಳಿತ ನಡೆಸುವುದು ಮಾಲ್ವಾದ ಅನೇಕರಿಗೆ ಸಹನೆಯಾಗದಿದ್ದರೂ ಹೋಳ್ಕರ್ ಸೈನ್ಯ ಅಹಲ್ಯಾಬಾಯಿಯ ಪರವಾಗಿ ನಿಂತಿತ್ತು. ಆಕೆ ತಾನೇ ಮುಂಚೂಣಿಯಲ್ಲಿ ನಿಂತು ಹೋರಾಟ ನಡೆಸಿ ಭಿನ್ನಮತವನ್ನು ಶಮನ ಮಾಡಿದಳು.

**ವ್ಯಕ್ತಿ ವಿಶೇಷ ಮಾಲಿಕೆ**

# ಅಹಲ್ಯಾ ಬಾಯಿ ಹೋಳ್ಕರ್

"ತನ್ನ ಮೆಚ್ಚಿನ ಆನೆಯ ಮೇಲೆ ನಾಲ್ಕು ಮೂಲೆಗಳಲ್ಲಿಯೂ ಬಾಣ ಬತ್ತಳಿಕೆಗಳನ್ನು ಜೋಡಿಸಿದ್ದ ಅಂಬಾರಿಯ ಮೇಲೆ ಸವಾರಿ ಮಾಡುತ್ತ ಸೈನ್ಯವನ್ನು ಅಹಲ್ಯಾಬಾಯಿ ಮುನ್ನಡೆಸಿದರು" ಎಂದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಗ್ವಾಲಿಯರ್ ಸಮೀಪ ಗೋಹಾಡ್ ಕೋಟೆಯನ್ನು ವಶಪಡಿಸಿಕೊಂಡ ಅಹಲ್ಯಾಬಾಯಿ ಇಡೀ ಮಧ್ಯಪ್ರದೇಶವನ್ನು ಮಾಲ್ವಾ ಸಂಸ್ಥಾನದ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗುತ್ತಾಳೆ. ತನ್ನ ಆಳ್ವಿಕೆಯ ಕಾಲದಲ್ಲಿ ಯುದ್ಧಮಾಡದೆ ತಂತ್ರಗಾರಿಕೆಯಿಂದಲೇ ರಾಜ್ಯ ವಿಸ್ತಾರ ಮಾಡಿದ ಖ್ಯಾತಿ ಅವಳದ್ದು.

### ಮುತ್ಸದ್ದಿತನ

ಯುದ್ಧಕಲೆಯಲ್ಲಿ ನಿಷ್ಣಾತಳಾಗಿದ್ದರೂ ಆಕೆ ಶ್ರೇಷ್ಠ ಮಟ್ಟದ ಮುತ್ಸದ್ದಿಯಾಗಿರುವುದು ಕಂಡುಬರುತ್ತದೆ. ತನ್ನ ವಿರುದ್ಧ ಬಂಡೆದ್ದಿದ್ದ ಎಲ್ಲರನ್ನೂ ಆಕೆ ಕ್ಷಮಿಸುತ್ತಾಳೆ. ರಾಜ್ಯದ ಗಡಿಗಳಲ್ಲಿ ಸದಾ ಕಿರಿಕಿರಿ ಮಾಡುತ್ತಿದ್ದ ಭಿಲ್ಲರು ಮತ್ತು ಗೊಂಡರ ಜೀವನ ವಿಧಾನಗಳನ್ನು ಗೌರವಿಸಿ ಅವರಿಗೆ ವಿಶಾಲವಾದ ಭೂಮಿಯನ್ನು ನೀಡಿದ್ದಲ್ಲದೆ ಆ ಪ್ರದೇಶದಲ್ಲಿ ಕರವಸೂಲಿ ಮಾಡುವ ಅಧಿಕಾರವನ್ನೂ ನೀಡುತ್ತಾಳೆ. ಈ ಮೂಲಕ, ಅವರ ವಿಶ್ವಾಸವನ್ನು ಗಳಿಸಿ ರಾಜ್ಯವನ್ನು ಭಯಮುಕ್ತ ಪ್ರದೇಶವನ್ನಾಗಿ ಮಾಡುತ್ತಾಳೆ. ಬ್ರಿಟಿಷರನ್ನು ಯಾವ ಕಾರಣಕ್ಕೂ ನಂಬಬಾರದು ಎಂದು ಪುಣೆಯ ಪೇಶ್ವೆಗಳಿಗೆ ಸಲಹೆ ನೀಡಿರುವುದೂ ಇತಿಹಾಸದಲ್ಲಿ ದಾಖಲೆಯಾಗಿದೆ. ತಾನು ಗೆದ್ದ ಪ್ರದೇಶಗಳ ರಾಜರನ್ನು ಗೌರವದಿಂದ ನಡೆಸಿಕೊಂಡುದಲ್ಲದೆ ಸೆರೆಸಿಕ್ಕಿದವರ ಹೆಂಡತಿ ಮಕ್ಕಳ ಯೋಗಕ್ಷೇಮವನ್ನೂ ನೋಡಿಕೊಳ್ಳುವ ಉದಾರತೆ ಆಕೆಯದಾಗಿತ್ತು..

### ಕುಶಲ ಆಡಳಿತಗಾರ್ತಿ

ಅಹಲ್ಯಾಬಾಯಿ, ಇಂದೋರಿನ ಸಮೀಪದ ಮಾಹೇಶ್ವರದಿಂದ ರಾಜ್ಯಭಾರ ಮಾಡುತ್ತಿದ್ದರೂ ಇಂದೋರ್ ನಗರದ ಸರ್ವತೋಮುಖ ಅಭಿವೃದ್ಧಿಗೆ ಕಾರಣಳಾದಳು. ಕೈಮಗ್ಗ, ಜವಳಿ ಮತ್ತು ಇತರ ಕುಶಲಕಲೆಗಳ ಕೇಂದ್ರವಾಗಿದ್ದ ಬುರ್ಹಾನ್ ಪುರವು ಮೊಘಲರ ಕಾಲದಲ್ಲಿ ನಿರ್ಲಕ್ಷ್ಯಕ್ಕೊಳಗಾದಾಗ ಅಲ್ಲಿನ ಕುಶಲ ಕರ್ಮಿಗಳಿಗೆ, ವ್ಯಾಪಾರಸ್ಥರಿಗೆ ಇಂದೋರ್ ನಗರದಲ್ಲಿ ಪುನರ್ವಸತಿ ಕಲ್ಪಿಸಿದಳು. ಅವಳ ಈ ದೂರದರ್ಶಿತ್ವದ ಫಲವಾಗಿ, ಇಂದೋರ್ ನಗರವು ಇಂದು ಪ್ರಮುಖ ಜವಳಿ ಉದ್ಯಮ ಕೇಂದ್ರವಾಗಿ ಬೆಳೆದು ನಿಂತಿದೆ. ಇದರ ಜೊತೆಗೆ, ಅನೇಕ ಕವಿಗಳಿಗೆ, ಕಲಾವಿದರಿಗೆ, ಸಾಧು ಸಂತರಿಗೆ ರಾಜಧಾನಿ ಮಾಹೇಶ್ವರದಲ್ಲಿ ನೆಲೆ ಕಲ್ಪಿಸಿಕೊಟ್ಟು ಪ್ರೋತ್ಸಾಹ ನೀಡಿದಳು.

ಮಾಲ್ವಾ ಪ್ರದೇಶದಲ್ಲಿ ಅಹಲ್ಯಾ ಬಾಯಿ ಕಟ್ಟಿಸಿದ ಕೆರೆಕಟ್ಟೆಗಳು, ಬಾವಿಗಳು, ಅಸಂಖ್ಯ ದೇವಾಲಯಗಳು ಮತ್ತು ರಸ್ತೆಗಳನ್ನು ಇಂದಿಗೂ ನೋಡಬಹುದು. ಸಾತ್‌ಬಾರಾ (ಏಳು- ಹನ್ನೆರಡು) ಎಂಬ ವಿನೂತನ ಕರಪದ್ಧತಿಯನ್ನು ಜಾರಿಗೆ ತಂದು ಪ್ರಜೆಗಳ ಜೀವನವನ್ನು ಸುಗಮಗೊಳಿಸಿದಳು. ಬರಗಾಲದ ಸಮಯದಲ್ಲಿ ತನ್ನ ಪ್ರಜೆಗಳಿಗೆ ಕರವಿನಾಯಿತಿ ಘೋಷಿಸುತ್ತಿದ್ದಳು.

### ಸರಳ ಜೀವನ - ಧರ್ಮಕಾರ್ಯಗಳು

ಅಹಲ್ಯಾಬಾಯಿ, ವೈಯಕ್ತಿಕವಾಗಿ ಸರಳವಾದ ಜೀವನಕ್ರಮವನ್ನು ಅಳವಡಿಸಿಕೊಂಡಿದ್ದಳು, ಯಾವಾಗಲೂ ಸಾದಾ ಬಿಳಿಸೀರೆಯನ್ನು ಉಟ್ಟುಕೊಳ್ಳುತ್ತಿದ್ದ ಆಕೆ ನೆಲದ ಮೇಲೆಯೇ ಮಲಗುತ್ತಿದ್ದಳು. ಮೂವತ್ತು ವರ್ಷಗಳವರೆಗೆ ವಿಶಾಲವಾದ ವೈಭವೋಪೇತ ಸಾಮ್ರಾಜ್ಯವೊಂದರ ಮಹಾರಾಣಿಯಾಗಿದ್ದರೂ ಆಕೆ ಸಿಂಹಾಸನದ ಮೇಲೆ ಕುಳಿತುಕೊಳ್ಳದೆ ಸರಳವಾದ ಪೀಠದಲ್ಲಿಯೇ ಕುಳಿತುಕೊಳ್ಳುತ್ತಿದ್ದಳು. ಪೂಜೆ, ಪುರಾಣಶ್ರವಣ, ಭಜನೆ, ಕೀರ್ತನೆಗಳು ಅವಳ ದಿನಚರಿಯ ಭಾಗವಾಗಿದ್ದವು.

ಸಾಮ್ರಾಜ್ಯದ ಆಸ್ತಿಗಳನ್ನು ಜತನದಿಂದ ಕಾಪಾಡಿದ ಆಕೆ ದಾನಧರ್ಮಗಳಿಗೆ ತನ್ನ ವೈಯಕ್ತಿಕ ಆಸ್ತಿಯನ್ನೇ ಬಳಸಿಕೊಂಡಿರುವುದು ಕಂಡುಬರುತ್ತದೆ. ಆಕೆಯ ಉದಾರ ದೇಣಿಗೆಯ ಫಲವಾಗಿ ದೇಶದ ಉದ್ದಗಲಗಳಲ್ಲಿ ನೂರಾರು ದೇವಾಲಯಗಳು ಪುನರ್ನಿರ್ಮಾಣಗೊಂಡವು. ಜ್ಞಾನವಾಪಿ ಮಸೀದಿಯ ಹಿಡಿತದಿಂದ ಕಾಶಿ ವಿಶ್ವೇಶ್ವರನ ದೇವಾಲಯವನ್ನು ಮುಕ್ತಗೊಳಿಸಿ ದೇವಾಲಯವನ್ನು 1776 ರಲ್ಲಿ ಪುನರ್ನಿರ್ಮಾಣ ಮಾಡಿದ ಕೀರ್ತಿ ಆಕೆಗೆ ಸಲ್ಲುತ್ತದೆ. ತನಗೆ ವಾರಸಿಕೆಯಿಂದ ಬಂದ ಹದಿನಾರು ಕೋಟಿ ರೂಪಾಯಿಗಳನ್ನೇ ಬಳಸಿ , ಕಾಶಿಯ ಅನೇಕ ಘಾಟ್‌ಗಳು, ಗಯಾ, ಬದರೀನಾಥ, ಸೋಮನಾಥ, ಅಯೋಧ್ಯಾ, ಮಥುರಾ, ಹರಿದ್ವಾರ, ಕಾಂಚಿ, ಅವಂತಿ, ದ್ವಾರಕಾ, ರಾಮೇಶ್ವರ, ಉಡುಪಿ ಮತ್ತು ಪುರಿ ಮುಂತಾದ ನೂರಾರು ಕಡೆ ದೇವಾಲಯಗಳ ಪುನರ್ನಿರ್ಮಾಣ ಮಾಡಿಸಿದಳು. ಪೂಜಾದಿಗಳಿಗೆ ದತ್ತಿ, ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಧರ್ಮಶಾಲೆಗಳು ಮುಂತಾದವುಗಳನ್ನು ಕಲ್ಪಿಸಿದಳು. ಹದಿನೆಂಟನೆಯ ಶತಮಾನದಲ್ಲಿ ಹಿಂದೂ ಧರ್ಮದ ಪುನರುತ್ಥಾನದ ಹರಿಕಾರ್ತಿ ಎಂದು ಅಹಲ್ಯಾಬಾಯಿಯನ್ನು ಧಾರಾಳವಾಗಿ ಹೆಸರಿಸಬಹುದು.

ವೈಯಕ್ತಿಕ ಜೀವನದಲ್ಲಿ ಅಪಾರ ಸಾವು ನೋವುಗಳನ್ನು ಎದುರಿಸಿದರೂ ಜನರ ಒಳಿತಿಗಾಗಿ ಸದಾ ಚಿಂತಿಸುತ್ತಿದ್ದ ಅಹಲ್ಯಾಬಾಯಿಯನ್ನು ಪ್ರಜೆಗಳು ಸಾಕ್ಷಾತ್ ದೇವಿಯ ಅವತಾರ ಎಂದು ಭಾವಿಸುತ್ತಿದ್ದರು. ಆಗಸ್ಟ್ 13, 1795 ರಲ್ಲಿ ತನ್ನ 70 ನೆಯ ವಯಸ್ಸಿನಲ್ಲಿ ಆಕೆ ನಿಧನ ಹೊಂದಿದಾಗ ಇಡೀ ಮಾಲ್ವಾ ಶೋಕಸಾಗರದಲ್ಲಿ ಮುಳುಗಿತ್ತು ಎಂದು ಬ್ರಿಟಿಷ್ ಅಧಿಕಾರಿ ಸರ್ ಜಾನ್ ಮಾಲ್ಕೋಮ್ ಬರೆದಿದ್ದಾರೆ. "ಅಹಲ್ಯಾಬಾಯಿಯಂತಹ ಇನ್ನೋರ್ವ ಮಹಿಳೆಯಿಲ್ಲ, ರಾಣಿಯೂ ಇಲ್ಲ" ಎಂದು ತನ್ನ ಕಡುವೈರಿ, ಹೈದರಾಬಾದಿನ ನಿಜಾಮನಿಂದಲೇ ಹೊಗಳಿಸಿಕೊಂಡ ಅಹಲ್ಯಾ ಬಾಯಿ ಹೋಳ್ಕರ್, ಮಹಿಳೆಯರಿಗೆ ಮಾತ್ರವಲ್ಲ, ಸಮಸ್ತ ಭಾರತೀಯರಿಗೆ ಸ್ಫೂರ್ತಿಯ ಸೆಲೆ ಎಂದರೆ ಅತಿಶಯೋಕ್ತಿಯಲ್ಲ.

**ಕೆ. ಜನಾರ್ದನ ತುಂಗ**

### ಅದಮ್ಯಚೇತನ ತಿಂಗಳ ವರದಿ (15.01.2022 - 15.02.2022)

# ಸಾವಿರ ಸಸಿಗಳ ನೆಡುವ ಸಡಗರ

ಅದಮ್ಯ ಚೇತನ ಸಂಸ್ಥೆಯ ಹಸಿರು ಬೆಂಗಳೂರು ಯೋಜನೆಯಡಿ ಬೆಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಶನಿವಾರ ಸಾವಿರ ಗಿಡಗಳನ್ನು ನೆಡಲಾಯಿತು. ದೇಶದ ಪ್ರಸಿದ್ಧ ಸಾಮ್ರಾಜ್ಯಗಳಾದ ಮೌರ್ಯರು, ಗುಪ್ತರು, ಬನವಾಸಿಯ ಕದಂಬರು, ವರ್ಧನರು, ಚಾಲುಕ್ಯರು, ರಾಷ್ಟ್ರಕೂಟರು, ಶಾತವಾಹನರು, ಪಾಂಡ್ಯರು, ಪಲ್ಲವರು, ಚೋಳರು, ಹೊಯ್ಸಳರು, ಗಂಗರು, ವಿಜಯನಗರ ಮತ್ತು ಮರಾಠರ ಸಾಮ್ರಾಜ್ಯದ ಹೆಸರುಗಳ ಸ್ವಯಂ ಸೇವಕರ ತಂಡಗಳನ್ನು ರಚಿಸಲಾಗಿತ್ತು. ಪ್ರತಿಯೊಂದು ತಂಡದ ಸ್ವಯಂ ಸೇವಕರೂ ಹಲಸು, ಬಟರ್ ಫ್ರೂಟ್, ನೇರಳೆ, ಸೀಬೆ, ಮಹಾಗನಿ, ಸೀತಾಫಲ ಗಿಡಗಳನ್ನು ನೆಟ್ಟರು.

ಎಂ .ಎಸ್.ರಾಮಯ್ಯ, ಆರ್. ವಿ ಕಾಲೇಜು, ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಯೂಥ್ ಫಾರ್ ಸೇವಾ ಹಾಗೂ ಯೂಥ್ ಫಾರ್ ಪರಿವರ್ತನ್ ಸಂಸ್ಥೆಗಳ ಕಾರ್ಯಕರ್ತರು, ಸಾರ್ವಜನಿಕರು ಸೇರಿದಂತೆ 750ಕ್ಕೂ. ಹೆಚ್ಚು ಜನ ಭಾಗವಹಿಸಿದ್ದರು. ಅದಮ್ಯ ಚೇತನ ಸಂಸ್ಥೆಯು ದಿವಂಗತ ಅನಂತಕುಮಾರ್ ಮಾರ್ಗದರ್ಶನದಲ್ಲಿ ಹಸಿರು ಭಾನುವಾರ ಕಾರ್ಯಕ್ರಮದಡಿ ನಿರಂತರವಾಗಿ ಸಸಿಗಳನ್ನು ನೆಡುತ್ತಾ ಬಂದಿದೆ. ಇದುವರೆಗೆ 320 ದಿನ ಈ ಕಾರ್ಯಕ್ರಮ ನಡೆದಿದೆ. 2 ಲಕ್ಷಕ್ಕೂ ಅಧಿಕ ಗಿಡಗಳನ್ನು ನೆಟ್ಟು ಬೆಳೆಸಲಾಗಿದೆ'.ಎಂದು ಸಂಸ್ಥೆಯ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ತಿಳಿಸಿದರು. ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ. ಆರ್ .ವೇಣುಗೋಪಾಲ್ ,ಆರ್‌ಎಸ್‌ಎಸ್ ಮುಖಂಡ ವಿ. ನಾಗರಾಜ್, ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್, ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಕಾಲೇಜಿನ ಪ್ರಾಂಶುಪಾಲ ಡಾ. ಮುರಳೀಧರ್, ವಿಭಾಗದ ಮುಖ್ಯಸ್ಥೆ ಡಾ. ಸುಜಾತಾ ಭಾಗವಹಿಸಿದ್ದರು.

## ಹಸಿರು ಭಾನುವಾರ

ಅದಮ್ಯ ಚೇತನದ ಹಸಿರು ಭಾನುವಾರ ಕಾರ್ಯಕ್ರಮ ನಿರಂತರವಾಗಿ ಮುಂದುವರಿದಿದೆ. 316ನೇ ಹಸಿರು ಭಾನುವಾರ ಕಾರ್ಯಕ್ರಮವು ಗವೀಪುರದ ಉದಯಭಾನು ಕಲಾಸಂಘದ ಸಮೀಪದ ಆವರಣದಲ್ಲಿ ಜರುಗಿತು; 317ನೇ ಕಾರ್ಯಕ್ರಮವನ್ನು ಕೆಂಪಾಂಬುಧಿ ಕೆರೆಯ ಅಂಗಳದಲ್ಲಿ ನೆರವೇರಿಸಲಾಯಿತು. 318ನೇ ಹಸಿರು ಭಾನುವಾರ ಕೊಮ್ಮಸಂದ್ರ ಕೆರೆಯ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ನಡೆಯಿತು. 319ನೇ ಕಾರ್ಯಕ್ರಮವನ್ನು ಕಳೆದ ಫೆಬ್ರವರಿ 6ರಂದು ಕಗ್ಗಲಿಪುರದ ಪಟಾಲಮ್ಮ ಗುಡಿಯ ಸಮೀಪದಲ್ಲಿ ಗಿಡಗಳನ್ನು ನೆಡುವ ಮೂಲಕ ಆಚರಿಸಲಾಯಿತು. ದಿನಾಂಕ 13 ಫೆಬ್ರವರಿ 2022ರ ಹಸಿರು ಭಾನುವಾರದಂದು ಕಾರ್ಯಕರ್ತರು ಬೆಂಗಳೂರು ವಿಶ್ವವಿದ್ಯಾಲಯ ಆವರಣದಲ್ಲಿ ಅನೇಕ ಸಸಿಗಳನ್ನು ನೆಟ್ಟರು. ಅದಮ್ಯಚೇತನ ಸಂಸ್ಥೆಯ ಸಹಯೋಗದಲ್ಲಿ ಬಳ್ಳಾರಿಯ ಸಮೃದ್ಧಿ ಫೌಂಡೇಶನ್ ಸದಸ್ಯರೂ ರಾಯಚೂರಿನ ಸ್ವಯಂಸೇವಾ ಸಂಸ್ಥೆಯ ಕಾರ್ಯಕರ್ತರೂ ಹಸಿರು ಭಾನುವಾರ ಕಾರ್ಯಕ್ರಮವನ್ನು ನಿರಂತರವಾಗಿ ಆಚರಿಸುತ್ತಿದ್ದಾರೆ.

## ಪೌರಕಾರ್ಮಿಕರಿಗೆ ಆಹಾರ ಪೂರೈಕೆ

ಇದೀಗ ಅದಮ್ಯ ಚೇತನವು ಪ್ರತಿ ನಿತ್ಯ ಬೆಂಗಳೂರಿನ ಸಾವಿರಾರು ಪೌರಕಾರ್ಮಿಕರಿಗೆ ಆಹಾರವನ್ನು ಒದಗಿಸುವ ಕರ್ತವ್ಯದಲ್ಲಿ ತೊಡಗಿಕೊಂಡಿದೆ. ನಗರದ 300 ಕೇಂದ್ರಗಳ ಮೂಲಕ ಪ್ರತಿದಿನ ಹದಿನಾಲ್ಕು ಸಾವಿರ ಪೌರಕಾರ್ಮಿಕರಿಗೆ ಆಹಾರವನ್ನು ಪೂರೈಸುವ ಬೃಹತ್ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಅದಮ್ಯ ಚೇತನ ಯಶಸ್ವಿಯಾಗಿದೆ.



## ಗಣ್ಯರ ಭೇಟಿ

ಶ್ರೀಮತಿ ಜ್ಯೋತಿ ಪ್ರಹ್ಲಾದ್ ಜೋಷಿ, ಶ್ರೀಮತಿ ಶಿಲ್ಪಾ ಜಗದೀಶ್ ಶೆಟ್ಟರ್, ಶ್ರೀಮತಿ ಭಾರತಿ ನಂದಕುಮಾರ್, ಮತ್ತು ಹುಬ್ಬಳ್ಳಿ ಯ ಸೇವಾ ಭಾರತಿ ಟ್ರಸ್ಟ್ ನ ಬಾಲಕಲ್ಯಾಣ ಕೇಂದ್ರ ದ ವ್ಯವಸ್ಥಾಪಕಿ ರತ್ನಮ್ಮ ಮಾತಾಜಿ ಯವರು ಇತ್ತೀಚೆಗೆ ಅದಮ್ಯ ಚೇತನಕ್ಕೆ ಭೇಟಿ ನೀಡಿ ಅಲ್ಲಿನ ಚಟುವಟಿಕೆಗಳನ್ನು ವೀಕ್ಷಿಸಿದರು.

## ಗಣರಾಜ್ಯೋತ್ಸವ

ಅದಮ್ಯ ಚೇತನದಲ್ಲಿ ಕಳೆದ ಜನವರಿ 26, 2022ರಂದು ಗಣರಾಜ್ಯೋತ್ಸವವನ್ನು ಸಡಗರದಿಂದ ಆಚರಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಡಾ. ತೇಜಸ್ವಿನಿ ಅನಂತಕುಮಾರ್ ಮತ್ತು ಸಂಸ್ಥೆಯ ಸಿಬ್ಬಂದಿಯವರೊಡನೆ ಅನೇಕ ಕಾರ್ಯಕರ್ತರು ಧ್ವಜಾರೋಹಣ ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಶ್ರೀ ಚೇತನ

ಶ್ರೀ ಚೇತನ ಆನ್ ಲೈನ್ ಕಾರ್ಯಕ್ರಮಗಳು ಪ್ರತಿ ಮಂಗಳವಾರದಂದು ನಡೆಯುತ್ತಿದ್ದು ಪ್ರತಿ ವಾರ ದೇಶಭಕ್ತಿ ಗೀತೆ, ಮಂಕುತಿಮ್ಮನ ಕಗ್ಗ ವಾಚನ, ಔಷಧೀಯ ಸಸ್ಯ ಪರಿಚಯ, ಆರೋಗ್ಯ ಅಡುಗೆ ಮೊದಲಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಾಗುತ್ತಿದೆ.

## ಗೀತಾಪಠಣ

ಅದಮ್ಯ ಚೇತನದಲ್ಲಿ ಪ್ರತಿ ಗುರುವಾರ ಸಂಜೆ ಒಂದು ಗಂಟೆಯ ಅವಧಿಯಲ್ಲಿ ಗೀತಾಪಠಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಭಗವದ್ಗೀತೆಯ ಪಠಣದ ನಂತರ ಕಾರ್ಯಕರ್ತರು ತರಕಾರಿ ಹೆಚ್ಚುವ ಕೆಲಸದಲ್ಲಿ ಕೈಜೋಡಿಸುವ ಮೂಲಕ ಅದಮ್ಯಚೇತನದ ಅಡುಗೆಮನೆಯ ಕಾರ್ಯದಲ್ಲಿ ನೆರವಾಗುತ್ತಿದ್ದಾರೆ.

## ಅನ್ನದಾನ

ಅದಮ್ಯಚೇತನದ ವತಿಯಿಂದ ನಿತ್ಯ ಅನ್ನದಾನ ಕಾರ್ಯಕ್ರಮವು ನಿರಂತರವಾಗಿ ನಡೆಯುತ್ತಿದ್ದು, ಗವಿಪುರ, ನಗರ್ತಪೇಟೆ, ಮಾರೇನಹಳ್ಳಿ, ಜಯನಗರ ಮೊದಲಾದ ಕಡೆಗಳಲ್ಲಿ ಅಗತ್ಯವಿರುವ ಜನರು ರುಚಿಕರವಾದ ಭೋಜನ ಸೌಲಭ್ಯವನ್ನು ಪಡೆಯುತ್ತಿದ್ದಾರೆ.






ಅನಂತಪಥ

Editor: **Gopal T.S** | Assistance: **K. Janardhana Thunga** | Layout: **Ananthakumar Pratishthana**
**Assistance: Sanjay R / Trivikram Joshi**

Inputs: **Poornaprajna | Sreelakshmi Vishwanath**
Photographs: **Ananthakumar Pratishthana | Adamya Chethana | Wikipedia | Gopal TS | Kengeri Chakrapani**
Acknowledgements: **Nagabharana | Chaya Bapat | Joyce Prakash**
Sketches: **Raghupathi Sringeri**
Printed at: **Rashtrothana Mudranalaya, Chamrajpet, Bengaluru**
Published by: **Dr. Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in



**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.



**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಅದಮ್ಯ ಸೇವಾ

( ಅದಮ್ಯ ಚೇತನ -ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಶ್ರೀಮತಿ ಜ್ಯೋತಿ ಪ್ರಹ್ಲಾದ್ ಜೋಷಿ, ಶ್ರೀಮತಿ ಶಿಲ್ಪಾ ಜಗದೀಶ್ ಶೆಟ್ಟರ್, ಶ್ರೀಮತಿ ಭಾರತಿ ನಂದಕುಮಾರ್, ಮತ್ತು ಹುಬ್ಬಳ್ಳಿಯ ಸೇವಾ ಭಾರತಿ ಟ್ರಸ್ಟ್ ನ ಬಾಲಕಲ್ಯಾಣ ಕೇಂದ್ರದ ವ್ಯವಸ್ಥಾಪಕಿ ರತ್ನಮ್ಮ ಮಾತಾಜಿ ಯವರು ಇತ್ತೀಚೆಗೆ ಅದಮ್ಯ ಚೇತನಕ್ಕೆ ಭೇಟಿನೀಡಿ ಅಲ್ಲಿನ ಚಟುವಟಿಕೆಗಳನ್ನು ವೀಕ್ಷಿಸಿದರು.



ಅದಮ್ಯ ಚೇತನದಲ್ಲಿ ಕಳೆದ ಜನವರಿ 26, 2022ರಂದು ಗಣರಾಜ್ಯೋತ್ಸವವನ್ನು ಸಡಗರದಿಂದ ಆಚರಿಸಲಾಯಿತು.






ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ 1100 ಗಿಡಗಳನ್ನು ನೆಡುವ ಕಾರ್ಯಕ್ರಮದಲ್ಲಿ ವಿವಿಧ ಗುಂಪುಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡ ಕಾರ್ಯಕರ್ತರು






ಅದಮ್ಯ ಚೇತನದಲ್ಲಿ ಪ್ರತಿ ಗುರುವಾರ ಸಂಜೆ ಗೀತಾ ಪಠಣ ಕಾರ್ಯಕ್ರಮ ನಡೆಯುತ್ತಿದ್ದು ಅನೇಕ ಕಾರ್ಯಕರ್ತರು ಶ್ರದ್ಧಾಪೂರ್ವಕ ಪಾಲ್ಗೊಂಡು, ಪಠಣದ ನಂತರ ಅಡುಗೆಮನೆ ಕೆಲಸಗಳಲ್ಲಿ ನೆರವು ನೀಡುತ್ತಿದ್ದಾರೆ.



ಅದಮ್ಯ ಚೇತನದ ಸಹಯೋಗದಲ್ಲಿ ಬಳ್ಳಾರಿಯ ಸಮೃದ್ಧಿ ಫೌಂಡೇಶನ್ ಸದಸ್ಯರು ಹಸಿರು ಭಾನುವಾರ ಕಾರ್ಯಕ್ರಮವನ್ನು ನಿರಂತರವಾಗಿ ಆಚರಿಸುತ್ತಿದ್ದಾರೆ.



ಅದಮ್ಯ ಚೇತನವು ಪ್ರತಿ ನಿತ್ಯ ನೂರಾರು ಪೌರಕಾರ್ಮಿಕರಿಗೆ ಆಹಾರವನ್ನು ಒದಗಿಸುವ ಕರ್ತವ್ಯದಲ್ಲಿ ತೊಡಗಿಕೊಂಡಿದೆ.

## ಅನಂತ ಚಿತ್ರಸಂಪುಟ

ಅಜಾತಶತ್ರು ಅನಂತಕುಮಾರ್ ತಮ್ಮ ರಾಜಕೀಯ ಜೀವನದಲ್ಲಿ ಅನಂತಕುಮಾರ್ ರಾಷ್ಟ್ರ ಮತ್ತು ರಾಜ್ಯದ ಹಿತಾಸಕ್ತಿಗಳನ್ನು ಮುಖ್ಯವಾಗಿ ಎಣಿಸಿದ್ದರೇ ಹೊರತು ಪಕ್ಷಸೀಮಿತ ಸ್ವಾರ್ಥಪರ ರಾಜಕಾರಣವನ್ನಲ್ಲ. ಎಲ್ಲ ರಾಜಕೀಯ ಮುತ್ಸದ್ದಿಗಳೂ ವಿವಿಧ ಪಕ್ಷಗಳ ಧುರೀಣರೂ ಅವರ ಸ್ನೇಹವಲಯದಲ್ಲಿ ಸ್ಥಾನಪಡೆದಿದ್ದರು.











